ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 25-03-1990.

# *ಸರ್ವ ಅನುಭೂತಿಗಳ ಪ್ರಾಪ್ತಿಗೆ ಆಧಾರ ಪವಿತ್ರತೆ*

(सर्व अनुभूतियों की प्राप्त का आधार पवित्रता)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸ್ನೇಹಸಾಗರ ಬಾಪ್‌ದಾದಾ ತನ್ನ ನಾಲ್ಕಾರು ಕಡೆಯ ಆತ್ಮಿಕ ಮಕ್ಕಳ ಆತ್ಮಿಕ ಲಕ್ಷಣಗಳನ್ನು ನೋಡುತ್ತಿದ್ದಾರೆ. ಪ್ರತಿಯೊಬ್ಬ ಬ್ರಾಹ್ಮಣ ಮಗುವಿನ ಚಹರೆಯಲ್ಲಿ ಆತ್ಮೀಯತೆಯಿದೆ ಆದರೆ ನಂಬರ್‌ವಾರ್ ಇದೆ ಏಕೆಂದರೆ ಆತ್ಮೀಯತೆಗೆ ಆಧಾರ ಪವಿತ್ರತೆಯಾಗಿದೆ. ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಎಷ್ಟೆಷ್ಟು ಪವಿತ್ರತೆಯ ಧಾರಣೆಯಿರುವುದೋ ಅಷ್ಟೇ ಆತ್ಮೀಯತೆಯ ಹೊಳಪು ಚಹರೆಯಲ್ಲಿ ಕಂಡುಬರುತ್ತದೆ. ಬ್ರಾಹ್ಮಣ ಜೀವನದ ಹೂಳಪು ಪವಿತ್ರತೆಯಾಗಿದೆ. ನಂತರ ಅತೀಂದ್ರಿಯ ಸುಖ ಮತ್ತು ಮಧುರ ಶಾಂತಿಗೆ ವಿಶೇಷ ಆಧಾರವು ಪವಿತ್ರತೆಯಾಗಿದೆ. ಪವಿತ್ರತೆಯು ನಂಬರ್‌ವಾರ್ ಇದ್ದರೆ ಈ ಅನುಭೂತಿಯ ಪ್ರಾಪ್ತಿಗಳು ನಂಬರ್‌ವಾರ್ ಆಗುತ್ತವೆ. ಒಂದುವೇಳೆ ಪವಿತ್ರತೆಯು ನಂಬರ್‌ವನ್ ಆಗಿದ್ದರೆ ತಂದೆಯ ಮೂಲಕ ಅನುಭೂತಿಗಳ ಪ್ರಾಪ್ತಿಯು ನಂಬರ್‌ವನ್ನಾಗಿಯೇ ಇರುತ್ತದೆ. ಪವಿತ್ರತೆಯ ಹೊಳಪು ಸ್ವತಹವಾಗಿ ನಿರಂತರ ಚಹರೆಯಲ್ಲಿ ಕಂಡುಬರುತ್ತದೆ. ಪವಿತ್ರತೆಯ ಆತ್ಮೀಯತೆಯ ನಯನಗಳು ಸದಾ ನಿರ್ಮಲವಾಗಿ ಕಾಣುತ್ತವೆ. ಸದಾ ನಯನಗಳಲ್ಲಿ ಆತ್ಮ ಮತ್ತು ಆತ್ಮಿಕ ತಂದೆಯ ಹೊಳಪಿನ ಅನುಭವವಾಗುವುದು. ಇಂದು ಬಾಪ್‌ದಾದಾ ಎಲ್ಲಾ ಮಕ್ಕಳಲ್ಲಿ ವಿಶೇಷವಾಗಿ ಈ ಹೊಳಪು ಮತ್ತು ಕಾಂತಿಯನ್ನು ನೋಡುತ್ತಿದ್ದಾರೆ. ತಾವೂ ಸಹ ತಮ್ಮ ಆತ್ಮಿಕ ಪವಿತ್ರತೆಯ ಚಹರೆಯನ್ನು ಜ್ಞಾನದ ದರ್ಪಣದಲ್ಲಿ ನೋಡಿಕೊಳ್ಳಬಲ್ಲಿರಿ ಏಕೆಂದರೆ ವಿಶೇಷ ಆಧಾರವು ಪವಿತ್ರತೆಯಾಗಿದೆ. **ಪವಿತ್ರತೆಯೆಂದು ಕೇವಲ ಬ್ರಹ್ಮಚರ್ಯಕ್ಕೆ ಹೇಳಲಾಗುವುದಿಲ್ಲ ಆದರೆ ಸದಾ ಬ್ರಹ್ಮಚಾರಿ ಮತ್ತು ಸದಾ ಬ್ರಹ್ಮಾಚಾರಿ ಅರ್ಥಾತ್ ಬ್ರಹ್ಮಾತಂದೆಯ ಆಚರಣೆಯಂತೆ ಪ್ರತೀ ಹೆಜ್ಜೆಯಲ್ಲಿ ನಡೆಯುವವರು.** ಅವರ ಸಂಕಲ್ಪ, ಮಾತು ಮತ್ತು ಕರ್ಮರೂಪಿ ಹೆಜ್ಜೆಯು ಸ್ವಾಭಾವಿಕವಾಗಿ ಬ್ರಹ್ಮಾತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯಿರುವುದು ಅದಕ್ಕೆ ತಾವು ಫುಟ್‌ಸ್ಟೆಪ್ ಎಂದು ಹೇಳುತ್ತಿರಿ. ಅವರ ಪ್ರತೀ ಹೆಜ್ಜೆಯಲ್ಲಿ ಬ್ರಹ್ಮಾತಂದೆಯ ಆಚರಣೆಯು ಕಂಡುಬರುವುದು ಅಂದಾಗ ಬ್ರಹ್ಮಚಾರಿಗಳಾಗುವುದು ಕಷ್ಟವಲ್ಲ. ಆದರೆ ಈ ಮನ-ವಾಣಿ-ಕರ್ಮದ ಆಚರಣೆಯು ಬ್ರಹ್ಮಾಚಾರಿಯಾಗಿರಲಿ- ಇದನ್ನು ಪರಿಶೀಲನೆ ಮಾಡಿಕೊಳ್ಳುವ ಅವಶ್ಯಕತೆಯಿದೆ ಮತ್ತು ಯಾರು

ಬ್ರಹ್ಮಾಚಾರಿಯಾಗಿರುವರೋ ಅವರ ಚಲನೆ ಮತ್ತು ಚಹರೆಯು ಸದಾ ಅಂತರ್ಮುಖಿ ಮತ್ತು ಅತೀಂದ್ರಿಯ ಸುಖದ ಅನುಭವವಾಗುವುದು.

ಒಂದನೆಯದು - ವೈಜ್ಞಾನಿಕ ಸಾಧನಗಳಾಗಿವೆ ಮತ್ತು ಬ್ರಾಹ್ಮಣ ಜೀವನದಲ್ಲಿ ಜ್ಞಾನದ ಸಾಧನಗಳಿವೆ ಅಂದಾಗ ಬ್ರಹ್ಮಾಚಾರಿ ಆತ್ಮನು ವೈಜ್ಞಾನಿಕ ಸಾಧನಗಳು ಹಾಗೂ ಜ್ಞಾನದ ಸಾಧನಗಳ ಆಧಾರದ ಮೇಲೆ ಸದಾ ಸುಖಿಯಾಗಿರುವುದಿಲ್ಲ. ಆದರೆ ಸಾಧನಗಳನ್ನೂ ಸಹ ತನ್ನ ಸಾಧನೆಯ ಸ್ವರೂಪದಲ್ಲಿ ಕಾರ್ಯದಲ್ಲಿ ತರುತ್ತಾರೆ. ಸಾಧನಗಳನ್ನು ಆಧಾರ ಮಾಡಿಕೊಳ್ಳುವುದಿಲ್ಲ ಆದರೆ ತನ್ನ ಸಾಧನೆಯ ಆಧಾರದಿಂದ ಸಾಧನಗಳನ್ನು ಕಾರ್ಯದಲ್ಲಿ ತರುತ್ತಾರೆ. ಹೇಗೆ ಕೆಲವು ಬ್ರಾಹ್ಮಣ ಆತ್ಮರು ಕೆಲಕೆಲವೊಮ್ಮೆ ಹೇಳುತ್ತಾರೆ- ನಮಗೆ ಈ ಅವಕಾಶ ಸಿಗಲಿಲ್ಲ. ಈ ಮಾತಿನ ಸಹಯೋಗ ಸಿಗಲಿಲ್ಲ, ಈ ಜೊತೆ ಸಿಗಲಿಲ್ಲ ಆದ್ದರಿಂದ ಖುಷಿಯು ಕಡಿಮೆಯಾಯಿತು ಅಥವಾ ಸೇವೆಯ ಸ್ವಯಂನ ಉಮ್ಮಂಗ-ಉತ್ಸಾಹವು ಕಡಿಮೆಯಾಗಿಬಿಟ್ಟಿತು ಎಂದು. ಮೊದಲಂತೂ ಬಹಳ ಅತೀಂದ್ರಿಯ ಸುಖವಿತ್ತು. ಉಮ್ಮಂಗ-ಉತ್ಸಾಹವೂ ಇತ್ತು - "ನಾನು ಮತ್ತು ಬಾಬಾ" ಮತ್ತೇನೂ ಕಾಣಲಿಲ್ಲ ಆದರೆ ಮೆಜಾರಿಟಿ 5 ವರ್ಷದಿಂದ 10 ವರ್ಷಗಳಲ್ಲಿ. ತಮ್ಮಲ್ಲಿ ಕೆಲಕೆಲವೊಮ್ಮೆ ಕೆಲವೊಂದು ರೀತಿಯ ಅನುಭವ ಮಾಡತೊಡಗುತ್ತಾರೆ. ಇದಕ್ಕೆ ಕಾರಣವೇನು? ಮೊದಲನೇ ವರ್ಷದಿಂದ 10 ವರ್ಷಗಳಲ್ಲಿ 10 ಪಟ್ಟು ಹೆಚ್ಚಾಗಬೇಕಲ್ಲವೆ ಆದರೆ ಏಕೆ ಕಡಿಮೆಯಾಯಿತು? ಇದಕ್ಕೆ ಕಾರಣವೇನೆಂದರೆ ಸಾಧನೆಯ ಸ್ಥಿತಿಯಲ್ಲಿದ್ದು ಸಾಧನಗಳನ್ನು ಕಾರ್ಯದಲ್ಲಿ ತೊಡಗಿಸುತ್ತಿಲ್ಲ. ಯಾವುದಾದರೊಂದು ಆಧಾರವನ್ನು ತನ್ನ ಉನ್ನತಿಯ ಆಧಾರವನ್ನಾಗಿ ಮಾಡಿಕೊಳ್ಳುತ್ತಾರೆ" ಆದ್ದರಿಂದ ಆ ಆಧಾರವು ಅಲುಗಾಡಿದರೆ ಉಮ್ಮಂಗ-ಉತ್ಸಾಹವೂ ಅಲುಗಾಡುತ್ತದೆ. ವಾಸ್ತವದಲ್ಲಿ ಆಧಾರ ತೆಗೆದುಕೊಳ್ಳುವುದು ಯಾವುದೇ ಕೆಟ್ಟಮಾತಲ್ಲ ಆದರೆ ಆಧಾರವನ್ನೇ ತಳಹದಿಯನ್ನಾಗಿ ಮಾಡಿಕೊಳ್ಳುತ್ತಾರೆ. ತಂದೆಯು ಮಧ್ಯದಲ್ಲಿ ಹೊರಟುಹೋಗುತ್ತಾರೆ ಮತ್ತು ಆಧಾರವನ್ನೇ ತಳಹದಿಯನ್ನಾಗಿ ಮಾಡಿಕೊಂಡುಬಿಡುತ್ತಾರೆ. ಆದ್ದರಿಂದ ಯಾವ ಏರುಪೇರು ಆಗುತ್ತದೆ? ಈ ರೀತಿ ಆಗಿದ್ದರೆ ಹೀಗೆ ಆಗುತ್ತಿರಲಿಲ್ಲ. ಈ ರೀತಿಯಾದರೆ ಹೀಗೆ ಆಗುವುದು, ಇದಂತೂ ಬಹಳ ಅವಶ್ಯಕವಾಗಿದೆ- ಈ ರೀತಿ ಅನುಭವವಾಗತೊಡಗುತ್ತದೆ. ಸಾಧನೆ ಮತ್ತು ಸಾಧನಗಳ ಬ್ಯಾಲೆನ್ಸ್ ಇರುವುದಿಲ್ಲ. ಸಾಧನಗಳ ಕಡೆ ಬುದ್ಧಿಯು ಹೆಚ್ಚಾಗಿ ಹೋಗುತ್ತದೆ. ಸಾಧನೆಯ ಕಡೆ ಬುದ್ಧಿಯು ಕಡಿಮೆಯಾಗುತ್ತದೆ ಆದ್ದರಿಂದ ಯಾವುದೇ ಕಾರ್ಯದಲ್ಲಿ ಸೇವೆಯಲ್ಲಿ ತಂದೆಯ ಆಶೀರ್ವಾದಗಳ ಅನುಭವ ಮಾಡುವುದಿಲ್ಲ ಮತ್ತು ಆಶೀರ್ವಾದಗಳು ಅನುಭವವಾಗದೇ ಇರುವ ಕಾರಣ ಸಾಧನಗಳ ಮೂಲಕ ಸಫಲತೆ ಸಿಕ್ಕರೆ ಮಾತ್ರ ಉತ್ಸಾಹ-ಉಲ್ಲಾಸವು ಚೆನ್ನಾಗಿರುತ್ತದೆ. ಸಫಲತೆ ಕಡಿಮೆಯಾದರೆ ಉತ್ಸಾಹ-ಉಲ್ಲಾಸವು ಕಡಿಮೆಯಾಗುತ್ತದೆ. **ಸಾಧನೆ ಅರ್ಥಾತ್ ಶಕ್ತಿಶಾಲಿ ಸ್ಮೃತಿ. ನಿರಂತರ ತಂದೆಯ ಜೊತೆ ಹೃದಯದ ಸಂಬಂಧ. ಕೇವಲ ಯೋಗದಲ್ಲಿ ಕುಳಿತುಕೊಂಡರೆ ಅದಕ್ಕೆ ಸಾಧನೆಯೆಂದು ಹೇಳುವುದಿಲ್ಲ ಆದರೆ ಹೇಗೆ ಶರೀರದಿಂದ ಕುಳಿತುಕೊಳ್ಳುತ್ತೀರೋ ಹಾಗೆಯೇ ಹೃದಯ ಮನಸ್ಸು-ಬುದ್ಧಿಯು ಒಬ್ಬ ತಂದೆಯ ಕಡೆ ತಂದೆಯ ಜೊತೆಜೊತೆಯಲ್ಲಿ ಸ್ಥಿತವಾಗಲಿ, ಶರೀರವು ಭಲೆ ಇಲ್ಲಿ ಕುಳಿತಿದೆ ಆದರೆ ಮನಸ್ಸು ಒಂದುಕಡೆ, ಬುದ್ಧಿಯು ಇನ್ನೊಂದು ಕಡೆ ಹೋಗುತ್ತಿದೆ. ಹೃದಯದಲ್ಲಿ ಮತ್ತೇನೋ ಬರುತ್ತಿದೆಯೆಂದರೆ ಇದಕ್ಕೆ ಸಾಧನೆಯೆಂದು ಹೇಳುವುದಿಲ್ಲ. ಮನ-ಬುದ್ಧಿ, ಹೃದಯ ಮತ್ತು ಶರೀರ ನಾಲ್ಕೂ ಸಹ ಜೊತೆ-ಜೊತೆಯಲ್ಲಿ ತಂದೆಯ ಜೊತೆ ಸಮಾನ ಸ್ಥಿತಿಯಲ್ಲಿರಲಿ. ಇದು ಯಥಾರ್ಥ ಸಾಧನೆಯಾಗಿದೆ**, ತಿಳಿಯಿತೇ- ಒಂದುವೇಳೆ ಯಥಾರ್ಥ ಸಾಧನೆಯಿಲ್ಲದಿದ್ದರೆ ಅಲ್ಲಿ ಆರಾಧನೆ ನಡೆಯುತ್ತದೆ. ಮೊದಲೂ ತಿಳಿಸಿದ್ದೇವೆ- ಕೆಲವೊಮ್ಮೆ ನೆನಪು ಮಾಡುತ್ತಾರೆ ಆದರೆ ಕೆಲವೊಮ್ಮೆ ದೂರುತ್ತಾರೆ. ನೆನಪಿನಲ್ಲಿ ದೂರಿನ (ಪ್ರಾರ್ಥನೆ) ಅವಶ್ಯಕತೆಯಿಲ್ಲ. ಸಾಧನೆಯಿರುವವರ ಆಧಾರ ಸದಾ ತಂದೆಯೇ ಆಗಿರುತ್ತಾರೆ ಮತ್ತು ಎಲ್ಲಿ ತಂದೆಯಿರುವರೋ ಅಲ್ಲಿ ಸದಾ ಮಕ್ಕಳ ಏರುವ ಕಲೆಯಾಗುವುದು. ಕಡಿಮೆಯಾಗುವುದಿಲ್ಲ ಬದಲಾಗಿ ಅನೇಕಪಟ್ಟು ಹೆಚ್ಚುತ್ತಾ ಹೋಗುತ್ತದೆ. ಕೆಲವೊಮ್ಮೆ ಕೆಳಗೆ ಕೆಲವೊಮ್ಮೆ ಮೇಲೆ ಇದರಲ್ಲಿ ಸುಸ್ತಾಗುತ್ತದೆ. ತಾವು ಯಾವುದೇ ಅಲುಗಾಡುವ ಸ್ಥಾನದಲ್ಲಿ ಕುಳಿತುಕೊಂಡರೆ ಏನಾಗುವುದು? ಹೇಗೆ ರೈಲಿನಲ್ಲಿ ಬಹಳ ಅಲುಗಾಡಿದರೆ ಸುಸ್ತಾಗುತ್ತದೆಯಲ್ಲವೆ. ಕೆಲವೊಮ್ಮೆ ಉತ್ಸಾಹ-ಉಲ್ಲಾಸದಲ್ಲಿ ಇರುತ್ತೀರಿ. ಕೆಲವೊಮ್ಮೆ ಮಧ್ಯದಲ್ಲಿರುತ್ತೀರಿ. ಇನ್ನೂ ಕೆಲವೊಮ್ಮೆ ಕೆಳಗಡೆ ಬಂದು ಬಿಡುತ್ತೀರೆಂದರೆ ಇದು ಗೊಂದಲವಾಯಿತಲ್ಲವೆ? ಆದ್ದರಿಂದ ಸುಸ್ತಾಗುತ್ತೀರಿ ಇಲ್ಲವೆಂದರೆ ಬೋರ್

ಆಗಿಬಿಡುತ್ತೀರಿ ನಂತರ ಹೀಗೇ ನಡೆಯುವುದೇ ಎಂದು ಆಲೋಚಿಸುತ್ತೀರಿ ಆದರೆ ಯಾರು ಸಾಧನೆಯ ಮೂಲಕ ತಂದೆಯ ಜೊತೆಯಿರುವರೋ ಅವರಿಗಾಗಿ ಸಂಗಮಯುಗದಲ್ಲಿ ಎಲ್ಲವೂ ಹೊಸದೇ ಹೊಸದರ ಅನುಭವವಾಗುತ್ತದೆ. ಪ್ರತೀ ಗಳಿಗೆ, ಪ್ರತೀ ಸಂಕಲ್ಪದಲ್ಲಿ ನವೀನತೆ. ಏಕೆಂದರೆ ಪ್ರತೀ ಹೆಜ್ಜೆಯಲ್ಲಿ ಹಾರುವಕಲೆ ಅರ್ಥಾತ್ ಪ್ರಾಪ್ತಿಯಲ್ಲಿ ಪ್ರಾಪ್ತಿಯಾಗುತ್ತಾ ಇರುತ್ತದೆ. ಪ್ರತೀ ಸಮಯ ಪ್ರಾಪ್ತಿಯಿದೆ. ಸಂಗಮಯುಗದಲ್ಲಿ ಸದಾ ತಂದೆಯು ಆಸ್ತಿ(ವಾರಸತ್ವ) ಮತ್ತು ವರದಾನದ ರೂಪದಲ್ಲಿ ಪ್ರಾಪ್ತಿಯೇ ಪ್ರಾಪ್ತಿಯನ್ನು ಮಾಡಿಸುತ್ತಿದ್ದಾರೆ. ಆದ್ದರಿಂದ ಪ್ರಾಪ್ತಿಯಲ್ಲಿ ಖುಷಿಯೂ ಇರುತ್ತದೆ ಮತ್ತು ಖುಷಿಯಲ್ಲಿ ಉಮ್ಮಂಗ-ಉತ್ಸಾಹವೂ ಹೆಚ್ಚುತ್ತಾ ಹೋಗುತ್ತದೆ. ಕಡಿಮೆಯಾಗುವುದಕ್ಕೆ ಸಾಧ್ಯವಿಲ್ಲ. ಭಲೆ ಮಾಯೆ ಬಂದರೂ ಸಹ ವಿಜಯಿಯಾಗುವ ಖುಷಿಯಿರುವುದು ಏಕೆಂದರೆ ಮಾಯೆಯ ಮೇಲೆ ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳಲು ಜ್ಞಾನಪೂರ್ಣರಾಗಿಬಿಟ್ಟಿದ್ದೀರಿ. ಅಂದಮೇಲೆ 10 ವರ್ಷದವರಿಗೆ 10 ಪಟ್ಟು, 20 ವರ್ಷದವರಿಗೆ 20 ಪಟ್ಟು ಹೆಚ್ಚಾಗುತ್ತಿದೆಯೇ? ಭಲೆ ಹೇಳಲು ಈ ರೀತಿ ಹೇಳಲಾಗುತ್ತದೆ ಆದರೆ ಅನೇಕ ಪಟ್ಟು ಹೆಚ್ಚಾಗಬೇಕಾಗಿದೆ.

ಈಗ ಈ ವರ್ಷದಲ್ಲಿ ಏನು ಮಾಡುವಿರಿ? ಉಮ್ಮಂಗ-ಉತ್ಸಾಹವಂತೂ ತಂದೆಯ ಮೂಲಕ ಸಿಕ್ಕಿರುವ ತಮ್ಮ ಸಂಪತ್ತಾಗಿದೆ. ತಂದೆಯ ಆಸ್ತಿಯನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದೀರಿ ಅಂದಮೇಲೆ ಆಸ್ತಿಯನ್ನು ಹೆಚ್ಚಿಸಿಕೊಳ್ಳುವಿರೋ ಅಥವಾ ಕಡಿಮೆ ಮಾಡಿಕೊಳ್ಳುವಿರೋ? ಈ ವರ್ಷದಲ್ಲಿ ವಿಶೇಷವಾಗಿ ನಾಲ್ಕು ಪ್ರಕಾರದ ಸೇವೆಯನ್ನು ಅಂಡರ್‌ಲೈನ್ ಮಾಡಿರಿ.

ಮೊದಲನೆಯದಾಗಿದೆ- ಸ್ವಯಂನ ಸೇವೆ, ಎರಡನೆಯದು- ವಿಶ್ವಸೇವೆ, ಮೂರನೆಯದು ಮನಸಾ ಸೇವೆ. ಒಂದು ವಾಣಿಯ ಮೂಲಕ ಸೇವೆಯಾಗಿದೆ. ಇನ್ನೊಂದು ಮನಸಾ ಸೇವೆಯು ವಿಶೇಷವಾಗಿದೆ. ನಾಲ್ಕನೆಯದು ಯಜ್ಞಸೇವೆ. ಎಲ್ಲಿಯೇ ಇರಿ, ಯಾವುದೇ ಸೇವಾಕೇಂದ್ರದಲ್ಲಿರಿ, ಆ ಸೇವಾಸ್ಥಾನವು ಯಜ್ಞಕುಂಡವಾಗಿದೆ. ಕೇವಲ ಮಧುಬನವು ಯಜ್ಞವಾಗಿದೆ ತಮ್ಮ ಸ್ಥಾನವು ಯಜ್ಞವಲ್ಲ ಎಂದಲ್ಲ. ಯಜ್ಞಸೇವೆ ಅರ್ಥಾತ್ ಕರ್ಮಣಾದ ಮೂಲಕ ಒಂದಲ್ಲ ಒಂದು ಸೇವೆಯನ್ನು ಅವಶ್ಯವಾಗಿ ಮಾಡಬೇಕು. ಬಾಪ್‌ದಾದಾರವರ ಬಳಿ ಸೇವೆಯ ಮೂರು ಪ್ರಕಾರದ ಖಾತೆಗಳು ಎಲ್ಲರದೂ ಜಮಾ ಆಗುತ್ತದೆ. ಮನಸಾ-ವಾಚಾ ಮತ್ತು ಕರ್ಮಣಾ, ತನು-ಮನ ಮತ್ತು ಧನ **ಕೆಲವರು ಬ್ರಾಹ್ಮಣರು ಯೋಚಿಸುತ್ತಾರೆ- ನಾವಂತೂ ಧನದಿಂದ ಸಹಯೋಗಿಗಳಾಗಲು ಆಗುವುದಿಲ್ಲ. ಸೇವೆ ಮಾಡಲು ಸಾಧ್ಯವಾಗುವುದಿಲ್ಲ ಏಕೆಂದರೆ ನಾವಂತೂ ಸಮರ್ಪಿತರಾಗಿದ್ದೇವೆ. ಹಣವನ್ನು ಸಂಪಾದಿಸುವುದೇ ಇಲ್ಲ ಅಂದಮೇಲೆ ಧನಸೇವೆಯನ್ನು ಹೇಗೆ ಮಾಡುವುದು ಎಂದು ಯೋಚಿಸುತ್ತಾರೆ ಆದರೆ ಒಂದುವೇಳೆ ಸಮರ್ಪಿತ ಅತ್ಮನು ಯಜ್ಞದ ಕಾರ್ಯದಲ್ಲಿ ಗಮನವನ್ನಿಟ್ಟು ಉಳಿತಾಯ ಮಾಡಿದರೆ ಅದು ಹಣದ ಉಳಿತಾಯ ಮಾಡಿದಂತೆ. ಆ ಉಳಿತಾಯದ ಹಣವು ತಮ್ಮ ಹೆಸರಿನಿಂದ ಜಮಾ ಆಗುತ್ತದೆ, ಅದು ಸೂಕ್ಷ್ಮ ಖಾತೆಯಾಗಿದೆ. ಒಂದುವೇಳೆ ಯಾರಾದರೂ ನಷ್ಟ ಮಾಡಿದರೆ ಅವರ ಖಾತೆಯಲ್ಲಿ ಹೊರೆಯು ಜಮಾ ಆಗುತ್ತದೆ ಮತ್ತು ಉಳಿತಾಯ ಮಾಡಿದರೆ ಅವರ ಧನದ ಖಾತೆಯಲ್ಲಿ ಜಮಾ ಆಗುತ್ತದೆ.** ಯಜ್ಞದ ಒಂದಂದು ಕಣವೂ ಮುತ್ತಿನ ಸಮಾನವಾಗಿದೆ. ಒಂದುವೇಳೆ ಯಜ್ಞದ ವಸ್ತುಗಳನ್ನು ಹೃದಯದಿಂದ (ತೋರ್ಪಡಿಕೆಯಿಂದ ಅಲ್ಲ) ಉಳಿತಾಯ ಮಾಡುತ್ತೀರೆಂದರೆ ಅದಕ್ಕೆ ಮುತ್ತುಗಳಷ್ಟು ಜಮಾ ಆಗುತ್ತಾ ಇರುತ್ತದೆ. ಎರಡನೆಯ ಮಾತು-ಒಂದುವೇಳೆ ಸಮರ್ಪಿತ ಆತ್ಮನು ಸೇವೆಯ ಮೂಲಕ ಅನ್ಯರ ಧನವನ್ನು ಸಫಲ ಮಾಡಿಸುತ್ತಾರೆಂದರೆ ಅದರಲ್ಲಿ ಇವರದೂ ಸಹ ಪಾಲು ಜಮಾ ಆಗುತ್ತದೆ. ಆದ್ದರಿಂದ ಎಲ್ಲರದೂ ಮೂರು ಪ್ರಕಾರದ ಖಾತೆಯಿದೆ, ಮೂರು ಖಾತೆಗಳ ಪರ್ಸೆಂಟೇಜ್ ಚೆನ್ನಾಗಿರಬೇಕು. ನಾವಂತೂ ವಾಚಾಸೇವೆಯಲ್ಲಿ ಬಹಳ ಬ್ಯುಸಿಯಾಗಿರುತ್ತೇವೆ. ನಮ್ಮದು ವಾಚಾಸೇವೆಯ ಕರ್ತವ್ಯವಾಗಿದೆ. ಮನಸಾ ಮತ್ತು ಕರ್ಮಣಾದಲ್ಲಿ ಪರ್ಸೆಂಟೇಜ್ ಕಡಿಮೆಯಾಗುತ್ತದೆ ಎಂದು ಹೇಳುತ್ತಾರೆ ಆದರೆ ಈ ನೆಪವೂ ನಡೆಯುವುದಿಲ್ಲ. ವಾಣಿಯ ಸಮಯದಲ್ಲಿ ಒಂದುವೇಳೆ ಮನಸ್ಸು ಮತ್ತು ವಾಚಾಸೇವೆಯನ್ನು ಒಟ್ಟಿಗೆ ಮಾಡಿದರೆ ಯಾವ ಫಲಿತಾಂಶವಾಗುವುದು? ಮನಸಾ ಮತ್ತು ವಾಚಾ ಸೇವೆಯನ್ನು ಒಟ್ಟಿಗೆ ಮಾಡಬಲ್ಲಿರಾ? ಆದರೆ ವಾಚಾ ಸಹಜವಾಗಿದೆ. ಮನಸಾ ಸೇವೆಯು ಗಮನ ಕೊಡುವ ಮಾತಾಗಿದೆ ಆದ್ದರಿಂದ ವಾಚಾಸೇವೆಯದು ಜಮಾ ಆಗಿಬಿಡುತ್ತದೆ. ಆದರೆ ಮನಸಾದ ಖಾತೆಯು ಖಾಲಿಯಾಗಿ ಉಳಿದುಕೊಳ್ಳುತ್ತದೆ. ವಾಚಾದಲ್ಲಿ ಎಲ್ಲರಿಗಿಂತಲೂ ಬುದ್ಧಿವಂತರಾಗಿದ್ದೀರಿ. ನೋಡಿ, ಇತ್ತೀಚೆಗೆ ಹಿರಿಯ ದಾದಿಯರಿಗಿಂತಲೂ ಚೆನ್ನಾಗಿ ಭಾಷಣವನ್ನು ಚಿಕ್ಕ-ಚಿಕ್ಕವರು ಮಾಡುತ್ತಾರೆ ಏಕೆಂದರೆ ಬಿಸಿರಕ್ತವಲ್ಲವೆ. ಭಲೆ ಮುಂದೆ ಬನ್ನಿರಿ,

ಬಾಪ್‌ದಾದಾ ಖುಷಿಪಡುತ್ತೇವೆ ಆದರೆ ಮನಸಾದ ಖಾತೆಯು ಖಾಲಿಯಾಗಿ ಉಳಿದುಕೊಳ್ಳುವುದು. ಏಕೆಂದರೆ ಪ್ರತೀ ಖಾತೆಗೆ 100 ಅಂಕಗಳಿವೆ. **ಕೇವಲ ಸ್ಥೂಲಸೇವೆಗೆ ಕರ್ಮಣಾ ಸೇವೆಯೆಂದು ಹೇಳುವುದಿಲ್ಲ. ಕರ್ಮಣಾ ಅರ್ಥಾತ್ ಸಂಘಟನೆಯಲ್ಲಿ, ಸಂಬಂಧ-ಸಂಪರ್ಕದಲ್ಲಿ ಬರುವುದು. ಇದು ಕರ್ಮದ ಖಾತೆಯಲ್ಲಿ ಜಮಾ ಆಗುತ್ತದೆ ಅಂದಾಗ ಕೆಲವರದು ಮೂರು ಖಾತೆಗಳಲ್ಲಿ ಬಹಳ ಅಂತರವಿದೆ ಮತ್ತು ಅವರು ಮಾತ್ರ ನಾವು ಬಹಳ ಸೇವೆ ಮಾಡುತ್ತಿದ್ದೇವೆ. ಬಹಳ ಚೆನ್ನಾಗಿದ್ದೇವೆ ಎಂದು ಖುಷಿಪಡುತ್ತಿರುತ್ತಾರೆ. ಭಲೆ ಖುಷಿಯಾಗಿರಿ ಆದರೆ ಖಾತೆಯು ಖಾಲಿಯೂ ಇರಬಾರದು ಏಕೆಂದರೆ ಬಾಪ್‌ದಾದಾ ಮಕ್ಕಳ ಸ್ನೇಹಿಯಲ್ಲವೆ ಅಂದಮೇಲೆ ನಮಗೆ ಹೀಗೂ ಆಗುತ್ತದೆಯೆಂದು ಸೂಚನೆಯನ್ನೂ ಕೊಡಲಿಲ್ಲ ಎಂದು ದೂರು ಕೊಡಬಾರದು. ಆ ಸಮಯದಲ್ಲಿ ಬಾಪ್‌ದಾದಾ ಈ ಮಾತನ್ನು ನೆನಪಿಗೆ ತರಿಸುವರು. ಟಿ.ವಿ.ಯಲ್ಲಿ ಚಿತ್ರವು ಸನ್ಮುಖದಲ್ಲಿ ಬರುವುದು.** ಆದ್ದರಿಂದ ಈ ವರ್ಷದಲ್ಲಿ ಸೇವೆಯನ್ನು ಭಲೆ ಬಹಳಷ್ಟು ಮಾಡಿರಿ ಆದರೆ ಈ ಮೂರು ಪ್ರಕಾರದ ಖಾತೆ ಮತ್ತು ನಾಲ್ಕುಪ್ರಕಾರದ ಸೇವೆಯನ್ನು ಜೊತೆಜೊತೆಯಲ್ಲಿ ಮಾಡಿರಿ. ವಾಚಾದ ಕಡೆ ಭಾರಿಯಾಗಿ ಮನಸಾ ಹಾಗೂ ಕರ್ಮಣಾ ಹಗುರವಾಗಿ ಬಿಟ್ಟರೆ ಏನಾಗುವುದು? ಬ್ಯಾಲೆನ್ಸ್ ಇರುವುದಿಲ್ಲ ಅಲ್ಲವೆ. ಬ್ಯಾಲೆನ್ಸ್ ಇಲ್ಲದಿರುವ ಕಾರಣ ಉಮ್ಮಂಗ-ಉತ್ಸಾಹವೂ ಸಹ ಏರಿಳಿತವಾಗುತ್ತದೆ. ಮೊಟ್ಟಮೊದಲನೆಯದಾಗಿ ಗಮನವನ್ನಿಡಿ ಆದರೆ ಬಾಪ್‌ದಾದಾ ಪದೇ-ಪದೇ ಹೇಳುತ್ತಾರೆ. ಅಟೆನ್ಶನ್‌ನ್ನು ಟೆನ್ಶನ್‌ನಲ್ಲಿ ಬದಲಾಯಿಸಬೇಡಿ. ಕೆಲವೊಮ್ಮೆ ಅಟೆನ್ಶನ್‌ನ್ನು ಟೆನ್ಶನ್ ಮಾಡಿಬಿಡುತ್ತಾರೆ. ಈ ರೀತಿ ಮಾಡಬೇಡಿ, ಸಹಜ ಮತ್ತು ಸ್ವಾಭಾವಿಕ ಅಟೆನ್ಶನ್ ಇರಲಿ, ಡಬಲ್‌ಲೈಟ್ ಸ್ಥಿತಿಯಲ್ಲಿ ಸ್ವಾಭಾವಿಕ ಅಟೆನ್ಶನ್ ಇದ್ದೇ ಇರುತ್ತದೆ. ಒಳ್ಳೆಯದು-

ಮೂರನೇ ವಿಷಯ ಸೇವೆಯಲ್ಲಿ ಯಾವ ವಿಧಿಯನ್ನು ಪಾಲಿಸುತ್ತಾರೆ. ಇದಂತೂ ಸಿದ್ಧಿಯ ವಿಷಯ. ಈಗ ಯಾವ ವಿಧಿಯನ್ನು ಪಾಲಿಸುತ್ತೀರಿ? ಎರಡು ವರ್ಷಗಳಿಂದ ಸರ್ವರ ಸಹಯೋಗ ಎಂಬ ಕಾರ್ಯಕ್ರಮ ನಡೆಯುತ್ತಿದೆ ಅದನ್ನು ಸಂಪನ್ನ ಮಾಡಿರಿ. ಸಮಾಪ್ತಿ ಎನ್ನಲಾಗುವುದಿಲ್ಲ ಸಂಪನ್ನ ಎಂದು ಕರೆಯಲಾಗುತ್ತದೆ. ಕಾರ್ಯಕ್ರಮ ಮಾಡಬೇಕೆಂದರೂ ಅಥವಾ ಪುಸ್ತಕಗಳು ತಯಾರು ಮಾಡಿ ಎಲ್ಲರಿಗೂ ಕೊಡಬೇಕಾದರೂ ಕೊಡಿ ಆದರೆ ಒಂದು ವಿಷಯ ತಪ್ಪದೇ ಗಮನದಲ್ಲಿಟ್ಟುಕೊಳ್ಳಬೇಕು ಕಡಿಮೆ ಖರ್ಚು ಹೆಚ್ಚು ಫಲಿತಾಂಶ. ಬಾಪ್‌ದಾದಾ ಆದಿಯಿಂದ ಅಂತಿಮದವರೆಗೆ ಇದೇ ವಿಧಿಯನ್ನು ಅನುಸರಿಸಿದ್ದಾರೆ. ಬಹಳ ಉನ್ನತವಾಗಿ ಇರಬಾರದು ಮತ್ತು ಬಹಳ ನೀಚವಾಗಿಯೂ ಇರಬಾರದು ಮಧ್ಯಸ್ಥವಾಗಿರಬೇಕು. ಏಕೆಂದರೆ ಎರಡು ವಿಧವಾದ ಆತ್ಮರು ಇರುತ್ತಾರೆ ಒಂದು ವೇಳೆ ಬಹಳ ಆರ್ಭಟವಾಗಿ ಮಾಡಿದರೆ ಪ್ರಜೆಗಳು ಇವರ ಹತ್ತಿರ ಬಹಳ ಧನ ಇದೆ ಎಂದು ತಿಳಿದುಕೊಳ್ಳುತ್ತಾರೆ ಹಾಗೆಂದು ಕಡಿಮೆ ಮಾಡಿದರೆ ಮೌಲ್ಯವಿರುವುದಿಲ್ಲ ಆದ್ದರಿಂದ ಸದಾ ಮಧ್ಯಸ್ಥವಾಗಿ ಇರಬೇಕು. ಇಲ್ಲಿಯವರೆಗೆ ತಯಾರು ಮಾಡಿರುವ ಪುಸ್ತಕಗಳು ಚೆನ್ನಾಗಿವೆ. ಸಂಪನ್ನ ಮಾಡಬೇಕು ಆದರೆ ಹೆಚ್ಚು ವಿಸ್ತಾರ ಮಾಡಬಾರದು ಬಹಳ ದೊಡ್ಡದಾಗಿ ತಯಾರು ಮಾಡಬಾರದು ಸಣ್ಣದಾಗಿ ಇರಬೇಕು ಮತ್ತು ಮಧುರವಾಗಿರಬೇಕು ಅಲ್ಲಲ್ಲಿ ವಿಸ್ತಾರದಲ್ಲಿ ಸಾರ ಗುಪ್ತವಾಗಿ ಬಿಡುತ್ತದೆ. ಸಾರವಿದ್ದರೆ ಬುದ್ಧಿಗೆ ಟಚ್ ಆಗುತ್ತದೆ. ಕಾರ್ಯ ಸರಿಯಾಗಿ ಮಾಡುತ್ತಿದ್ದೀರಿ ಆದರೆ ನಿಮ್ಮ ಬುದ್ಧಿಯನ್ನು ಅತಿ ಬ್ಯುಸಿಯಾಗಿ ಉಳಿಸಿಕೊಳ್ಳಬಾರದು. ಇದನ್ನು ಕೂಡಾ ಮಧ್ಯಸ್ಥವಾಗಿ ಇಟ್ಟುಕೊಳ್ಳಬೇಕು. ಸಮಯ ಮತ್ತು ಬುದ್ಧಿಯ ಶಕ್ತಿಯಲ್ಲಿ ಕೂಡ ಕಡಿಮೆ ಖರ್ಚು ಹೆಚ್ಚು ಫಲಿತಾಂಶ. ಶ್ರಮಿಸುವವರೆಲ್ಲರಿಗೂ ಶುಭಾಶಯಗಳು. ಮುಂಬರುವ ವರ್ಷದಲ್ಲಿ ಇದ್ದರೂ ಕೂಡ ಕಾರ್ಯವನ್ನು ಸಂಪನ್ನ ಮಾಡಲೇಬೇಕು. ಬಹಳ ಹೆಚ್ಚು ಸಮಯವಾಗಿದೆ ಎಂದು ಕೆಲವರು ತಿಳಿಯುತ್ತಿದ್ದಾರೆ ಅತಿ ಬ್ಯುಸಿಯಾಗಿ ಇರುತ್ತಿದ್ದಾರೆ ಮತ್ತು ಖರ್ಚು ಕೂಡ ಬಹಳ ಆಗಿದೆ ಎಂದು. ಆದರೆ ಆದದ್ದೇನು ಚೆನ್ನಾಗಿಯೇ ಆಗಿದೆ ಇನ್ನು ಮುಂದೆ ಆಗುವುದು ಕೂಡ ಚೆನ್ನಾಗಿಯೇ ಆಗುತ್ತದೆ. ದಣಿವರಿಯಬಾರದು. ಉತ್ಸಾಹ ಉಲ್ಲಾಸಗಳನ್ನು ಇನ್ನಷ್ಟು ಹೆಚ್ಚಿಸಿರಿ. ಎಷ್ಟು ಆಸಕ್ತಿಯಿಂದ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿರುವಿರೋ ಅಷ್ಟಕ್ಕೆ ಅನೇಕ ಪಟ್ಟು ಕಡಿಮೆ ಖರ್ಚು ಹೆಚ್ಚು ಫಲಿತಾಂಶ ಎಂಬ ವಿಧಿಯಿಂದ ಈ ಕಾರ್ಯವನ್ನು ಸಂಪನ್ನ ಮಾಡಿರಿ. ತಿಳಿಯಿತೇ? ಮಾಡುವ ಸಮಯವನ್ನು ನಿರ್ಣಯಿಸಬೇಕು ರಾತ್ರಿ ಕೆಲಸ ಮಾಡಿದರೆ ಚೆನ್ನಾಗಿರುತ್ತದೆ ಎಂಬುದು ಕೆಲವರ ಅಭಿಪ್ರಾಯ ಆದರೆ ಬುದ್ಧಿ ದಣಿಯುತ್ತದೆ ಮತ್ತು ಅಮೃತವೇಳೆ ಶಕ್ತಿಶಾಲಿಯಾಗಿ ಇರುವುದಿಲ್ಲ. ಆಗ ಎರಡು ಪಟ್ಟು ನಡೆಯಬೇಕಾಗಿರುವ ಕೆಲಸ ಒಂದು ಪಟ್ಟು ಮಾತ್ರವೇ ನಡೆಯುತ್ತದೆ ಆದ್ದರಿಂದ

ಸಮಯಕ್ಕೆ ಕೂಡ ಮಿತಿ ಇರಬೇಕು ಆನಂತರ ಮತ್ತೆ ಮುಂಜಾನೆ ಎದ್ದು ತಾಜಾ ಬುದ್ಧಿಯಿಂದ ವಿದ್ಯಾಭ್ಯಾಸವನ್ನು ಅಭ್ಯಸಿಸಬೇಕು. ಕೆಲಸ ಮಾಡಲು ಕೂಡ ಮಿತಿ ಇರಬೇಕು ಮಕ್ಕಳ ಉತ್ಸಾಹವನ್ನು ನೋಡಿ ತಂದೆಯಂತೂ ಸಂತೋಷಿಸುತ್ತಿದ್ದಾರೆ ಆದರೆ ಮಿತಿ ಇಟ್ಟುಕೊಳ್ಳಬೇಕು ತಾನೇ ಬುದ್ಧಿಯನ್ನು ಸದಾ ತಾಜಾವಾಗಿ ಇಡಬೇಕು. ಆ ತಾಜಾ ಬುದ್ಧಿಯಿಂದ ಯಾವ ಕೆಲಸವಾದರೂ ಒಂದು ತಾಸಿನಲ್ಲಿ ಎರಡು ತಾಸಿನಷ್ಟು ಮಾಡಬಲ್ಲಿರಿ. ಇದು ಮೊದಲನೇ ಸೇವಾಕಾರ್ಯ.

ಎರಡನೆಯದು - ವರ್ತಮಾನ ಸಮಯದಲ್ಲಿ ಧನ ಮತ್ತು ಸಮಯವನ್ನು ದೇಶವಿದೇಶದವರು ಈ ಬ್ಯುಸಿ ಕಾರ್ಯಕ್ರಮದಲ್ಲಿ ಹೆಚ್ಚು ಉಪಯೋಗಿಸಿದ್ದಾರೆ. ಆದ್ದರಿಂದ ಈಗ ಸಂಬಂಧ ಸಂಪರ್ಕಗಳಲ್ಲಿ ಬಂದಿರುವವರಾದರೂ ಹೊಸಬರಾದರೂ ಸಂದೇಶವನ್ನು ಕೊಟ್ಟು ಸ್ನೇಹದ ಮಿಲನವನ್ನು ಮಾಡಿರಿ. ಚಿಕ್ಕ ಚಿಕ್ಕ ಸೇವಾ ಕೇಂದ್ರದಲ್ಲಿ ಐವರ ಸ್ನೇಹ ಮಿಲನವಾದರೂ ಪರವಾಗಿಲ್ಲ ಅವರು ಮತ್ತಷ್ಟು ತಾಜಾ ಆಗುತ್ತಾರೆ ಸಮೀಪವಾಗುತ್ತಾ ಇರುತ್ತಾರೆ ಸಣ್ಣ ಸಣ್ಣ ಸ್ನೇಹ ಮಿಲನಗಳನ್ನು ಮಾಡಿರಿ. ಐವರಿಂದ 50 ಜನರವರೆಗೆ ಅಥವಾ ನೂರರವರೆಗೆ ಕೂಡ ಸಮ್ಮೇಳನವನ್ನು ಮಾಡಬಲ್ಲಿರಿ ದೊಡ್ಡ ಕಾರ್ಯಕ್ರಮ ಎಂದಲ್ಲ ಎಷ್ಟು ಸ್ಥಾನವೋ ಅದರ ಅನುಸಾರ ಕಡಿಮೆ ಖರ್ಚು ಹೆಚ್ಚು ಫಲಿತಾಂಶ ನಿಮಗೆ ಸ್ಥಾನ ಕೂಡ ಬಹಳ ಸಹಜವಾಗಿ ಲಭಿಸುತ್ತದೆ. ಹೆಚ್ಚಾಗಿ ಓಡಬಾರದು ನಿಮ್ಮ ಹತ್ತಿರ ನೂರು ಜನ ಬರಬೇಕಾದರೆ ಡ್ರಾಮಾನುಸಾರ ಅವರಿಗೆ ಸರಿಯಾಗುವಷ್ಟು ಸ್ಥಾನ ಸಹಜವಾಗಿ ಲಭಿಸುತ್ತದೆ ಆದರೆ ಸಣ್ಣ ಸೇವಾ ಕೇಂದ್ರದವರು ನಾವು ಕೂಡ ನೂರು ಜನರೊಂದಿಗೆ ಕಾರ್ಯಕ್ರಮ ಮಾಡಬೇಕು ಎಂದು ತಿಳಿಯಬೇಕಾಗಿಲ್ಲ ಶಕ್ತಿಯನ್ನು ಅನುಸರಿಸಿ ಸಹಯೋಗಿಯಾಗಿರಿ. ಸ್ನೇಹವನ್ನು ಅನುಸರಿಸಿ, ಧನ ಶಕ್ತಿಯನ್ನು ಅನುಸರಿಸಿ ಐವರನ್ನು ಮಾಡಿದರೂ, 10 ಜನಕ್ಕೆ ಸೇವ ಸೇವೆ ಮಾಡಿದರೂ 25 ಜನಕ್ಕೆ ಮಾಡಿದರೂ ಮಾಡುವುದಂತೂ ತಪ್ಪದೇ ಮಾಡಿರಿ. ತಪ್ಪದೇ ಬ್ಯುಸೀಯಾಗಿ ಇರಬೇಕು ಪ್ರತಿ ಮೂರು ತಿಂಗಳಿಗೆ ಅಥವಾ ಐವರಿಗೆ ಮಾಡಿರಿ. ಆದರೆ ಮಾಡಬೇಕಾದದ್ದು ಮಾಡಲೇಬೇಕು ಮೊದಲು ಐವರಿಗೆ ಸ್ನೇಹಮಿಲನ ಮಾಡುತ್ತೀರಿ ಆ ಐವರು ಆತ್ಮರು ಇನ್ನೂ ಇಬ್ಬರು ಅಥವಾ ಮೂವರನ್ನು ಕರೆತರುತ್ತಾರೆ ಆಗ ಎರಡನೇ ಬಾರಿ 10 ಜನ ಆಗುತ್ತಾರೆ. ಆ ಹತ್ತು ಜನ ಮತ್ತೆ ಹದಿನೈದು ಜನರನ್ನು ಕರೆತರುತ್ತಾರೆ ಏಕೆಂದರೆ ಡಬಲ್ ಲೈಟ್ ಆಗಿ ಸೇವೆಯನ್ನು ಮಾಡುತ್ತೀರಿ. ಭಾರವಾಗಿ ಮಾಡಬಾರದು ಹಾಗೆಂದು ಸೇವೆ ಬಹಳ ಮಾಡಿಬಿಟ್ಟಿದ್ದೇವೆ ಎಂದು ಸೋಮಾರಿಯೂ ಆಗಬಾರದು. ಸೇವೆ ಎಂಬುದು ಬ್ಯುಸಿಯಾಗಿ ಇರಲು ಸಾಧನ ಆದರೆ ಭಾರವಾಗಿ ಸೇವೆ ಮಾಡುತ್ತಿದ್ದೀರಿ ಆದ್ದರಿಂದ ದಣಿಯುತ್ತಿದ್ದೀರಿ. ಸೇವೆ ಸಂತೋಷವನ್ನು ಹಂಚುತ್ತದೆ ಸೇವೆ ಅನೇಕಾತ್ಮರ ಆಶೀರ್ವಾದಗಳನ್ನು ಕೊಡಿಸುತ್ತದೆ. ಸೇವೆ ಮಾಡದಿದ್ದರೆ ಒಂಬತ್ತು ಲಕ್ಷದವರೆಗೆ ಹೇಗೆ ತಯಾರಾಗುತ್ತಿರಿ. ಸೇವೆ ಮಾಡಿರಿ ಆದರೆ ಭಾರವಾಗಿ ಮಾಡಬಾರದು ಎಂಬ ಗಮನವಿಡಿ. ಬುದ್ದಿಗೆ, ಧನಕ್ಕೆ ಕೂಡ ಭಾರವಾಗಬಾರದು. ಸ್ವಯಂ ಸಹಜವಾಗಿ ಮಾಡಿದರೆ ಸೇವೆಯು ಸಹಜವಾಗಿ ಬೆಳೆಯುತ್ತದೆ. ಯಾವ ವಿಧಿಗಳನ್ನಾದರೆ ಪಾಲಿಸುತ್ತಿದ್ದೀರೋ ಅವುಗಳನ್ನು ತಪ್ಪದೇ ಪಾಲಿಸಿರಿ ಒಂದು ವೇಳೆ ಯಾರಾದರೂ ನಿಮಗೆ ಸಹಯೋಗಿಯಾಗಿ ತಯಾರಾಗಿರುವ ವೇದಿಕೆಯನ್ನು ನಿಮಗೆ ದೊಡ್ಡ ಕಾರ್ಯಕ್ರಮಗಳಿಗಾಗಿ ಕೊಡುತ್ತಿದ್ದರೆ ದೊಡ್ಡ ಕಾರ್ಯಕ್ರಮ ಮಾಡಿರಿ. ಆಗ ಬುದ್ಧಿಗೆ, ಧನಕ್ಕೆ ಕೂಡ ಭಾರವಿರುವುದಿಲ್ಲ ಅಂತಹ ಸಂಸ್ಥೆಗಳು ಕೂಡ ಇರುತ್ತವೆ ಅಂತಹವರನ್ನು ನಿಮ್ಮ ಸಹಯೋಗಿಯನ್ನಾಗಿ ಮಾಡಿಕೊಳ್ಳಿ. ಇದನ್ನು ಪ್ರಯತ್ನಿಸಿರಿ ಧೈರ್ಯವಿದ್ದರೆ ಒಂದು ದೊಡ್ಡ ಕಾರ್ಯಕ್ರಮವನ್ನು ತಪ್ಪದೇ ಮಾಡಿರಿ. ಧೈರ್ಯವಿಲ್ಲದಿದ್ದರೆ ಮಾಡಬಾರದು ದೊಡ್ಡ ಕಾರ್ಯಕ್ರಮ ಸಂಸ್ಥೆಗೆ ಹೆಸರು ತರುತ್ತದೆ ಆದರೆ ಡಬಲ್ ಲೈಟ್ ಆಗಿ ಮಾಡಿರಿ ನಿಮ್ಮ ಶಕ್ತಿಯನ್ನು ಉಪಯೋಗಿಸುವ ಬದಲು ಇತರರ ಶಕ್ತಿ ಈ ಈಶ್ವರೀಯ ಕಾರ್ಯದಲ್ಲಿ ಉಪಯೋಗವಾಗಬೇಕು. ಎಂಬ ಲಕ್ಷಣವನ್ನು ಇಡಿ ಗುರಿಯನ್ನು ಇಟ್ಟುಕೊಂಡರೆ ಬಹಳ ಆಹ್ವಾನಗಳು ಬರುತ್ತವೆ. ಯಾವುದೋ ಒಂದು ವರ್ಗಕ್ಕೆ ಸಂಬಂಧಿಸಿದ ಸಹಯೋಗಿ ಕ್ಷೇತ್ರಗಳೆಲ್ಲವೂ ದೇಶದಲ್ಲಿ ಲಭಿಸುತ್ತದೆ ವರ್ತಮಾನ ಸಮಯದಲ್ಲಿ ಕೆಲವು ಸಂಸ್ಥೆಗಳ ಶಕ್ತಿ ಇರುತ್ತದೆ ಆದರೆ ಅದನ್ನು ಉಪಯೋಗಿಸುವ ವಿಧಿ ಅವರಿಗೆ ಬರುವುದಿಲ್ಲ ಅವರು ಇಂತಹ ಸಹಯೋಗವನ್ನು ಬಯಸುತ್ತಾರೆ ಆದರೆ ಅವರಿಗೆ ಯಾರೂ ಕಾಣಿಸುವುದಿಲ್ಲ. ಅಂತಹವರು ನಿಮಗೆ ಬಹಳ ಪ್ರೀತಿಯಿಂದ ಸಹಯೋಗವನ್ನು ಕೊಡುತ್ತಾರೆ. ಸಮೀಪವೂ ಬರುತ್ತಾರೆ ಆಗ ನಿಮಗೂ 9 ಲಕ್ಷ ಪ್ರಜೆಗಳ ವೃದ್ಧಿ ಆಗುತ್ತದೆ, ಕೆಲವರು ವಾರಸರು ಕೂಡ ಬರುತ್ತಾರೆ. ಪ್ರಜೆಗಳು ಕೂಡ ಬರುತ್ತಾರೆ ಸರ್ವರ ಸಹಯೋಗ ಎಂಬ ಕಾರ್ಯಕ್ರಮದಲ್ಲಿ ಕೆಲವರು

ಸಹೋಗಿಗಳಾಗಿ ಬಂದಿದ್ದಾರೆ. ಈಗ ಅವರು ವಾರಸರಾಗಿದ್ದಾರೆ ಅತಿಥಿಯಾಗಿ ಬಂದರು, ಮಹಾನಾಗಿ ಬಿಟ್ಟರು ಈ ವಿಧವಾದ ಬಹಳ ಸಮೀಪಾತ್ಮರು ಬಂದರು ಮತ್ತು ಇನ್ನು ಮುಂದೆ ಕೂಡ ಬರುತ್ತಾರೆ. ಯಾವುದೋ ಒಂದು ಮಾಡುತ್ತಲೇ ಇರಿ. ಆದರೆ ಬಾಪ್‌ದಾದಾ ಮತ್ತೆ-ಮತ್ತೆ ಸ್ಮೃತಿಯನ್ನು ತರಿಸುತ್ತಿದ್ದಾರೆ ಡಬಲ್ ಲೈಟ್ ಆಗಿ ಮಾಡಿರಿ. ಭಾರತ ದೇಶದಲ್ಲಿಯೂ ಈ ವಿಧಿಯಿಂದ ಸ್ನೇಹ ಮಿಲನಗಳನ್ನು ಮಾಡುತ್ತಾ ಮಾಡುತ್ತಾ ಕೊನೆಯಲ್ಲಿ ದೊಡ್ಡ ಕಾರ್ಯಕ್ರಮವನ್ನು ತಪ್ಪದೇ ಮಾಡಿರಿ. ಭಾರತ ದೇಶದಲ್ಲಾದರೆ ಪ್ರದರ್ಶನದಿಂದ ಕೂಡ ಒಳ್ಳೆಯ ಫಲಿತಾಂಶ ಬರುತ್ತದೆ. ಸಣ್ಣ ಸಣ್ಣ ಸ್ನೇಹ ಮಿಲನಗಳನ್ನು ಮಾಡಿ ಸಮೀಪಕ್ಕೆ ತನ್ನಿರಿ ಆನಂತರ ದೊಡ್ಡ ಕಾರ್ಯಕ್ರಮಗಳಲ್ಲಿ ಅವರನ್ನು ವೇದಿಕೆಯ ಮೇಲೆ ತನ್ನಿರಿ. ಆಗ ಅವರು ತಮ್ಮ ಅನುಭವದಿಂದ ಹೇಳಲು ಬಂದಿರಬೇಕು ಆಗ ನೀವು ಹೇಳುವ ಅವಶ್ಯಕತೆ ಇರುವುದಿಲ್ಲ ದೊಡ್ಡ ಕಾರ್ಯಕ್ರಮದ ಪ್ರಭಾವವಂತೂ ಇದ್ದೇ ಇರುತ್ತದೆ. ಸ್ನೇಹ ಮಿಲನದ ಪ್ರಭಾವ, ಸಫಲತೆ ನಿಮ್ಮದು. ಸ್ನೇಹ ಮಿಲನ ಮಾಡುವುದು ಅರ್ಥಾತ್ ಆತ್ಮರ ಭೂಮಿಯನ್ನು ತಯಾರು ಮಾಡುವುದು. ದೊಡ್ಡ ಕಾರ್ಯಕ್ರಮ ಅರ್ಥಾಥ್ ಧ್ವನಿಯನ್ನು ಪ್ರಸಿದ್ಧ ಮಾಡುವುದು. ಆದರೆ ಶಕ್ತಿಯನ್ನು ಅನುಸರಿಸಿ ಮಾಡಿರಿ. ಆಜ್ಞೆ ಲಭಿಸಿದೆಯಲ್ಲವೇ ಎಂದು ಮಾಡಲಾಗದಿದ್ದರೂ ಶ್ರಮದಿಂದ ಮಾಡಬೇಡಿರಿ ಅರ್ಥವಾಯಿತೆ?

ಮೂರನೇ ವಿಷಯ - ಸ್ವಉನ್ನತಿಗಾಗಿ ಇಷ್ಟಕ್ಕೂ ಮುಂಚೆಯೂ ತಿಳಿಸಿದ್ದೇನೆ ನಿಮ್ಮ ಮೂರು ಖಾತೆಗಳನ್ನು ಜಮಾ ಮಾಡಿಕೊಳ್ಳಿರಿ. ಆದರೆ ಅದರೊಂದಿಗೆ ಬಾಪ್‌ದಾದಾ ಫಲಿತಾಂಶದಲ್ಲಿ ನೋಡುತ್ತಿದ್ದಾರೆ ಸೇವಾ ವೃದ್ಧಿಯೊಂದಿಗೆ ಯಾರಾದರೆ ನಿಮಿತ್ತಾತ್ಮರಿದ್ದಾರೋ ಅವರನ್ನು ನೀವು ನಿಮಿತ್ತ ಸೇವಾಧಾರಿ ಎಂದು ಕರೆಯುತ್ತೀರಿ. ಬಾಪ್‌ದಾದಾ ಟೀಚರ್ ಎಂಬ ಪದವನ್ನು ಬಳಸುವುದಿಲ್ಲ. ಏಕೆಂದರೆ ಅಲ್ಲಲ್ಲಿ ಟೀಚರ್ ಎಂದು ಭಾವಿಸುವುದರಿಂದ ನಶೆ ಬಹಳ ಆಗುತ್ತಿದೆ ಆದ್ದರಿಂದ ನಿಮಿತ್ತ ಸೇವಾಧಾರಿ ಎಂದು ಕರೆಯುತ್ತಾರೆ. ಅಂತಹ ನಿಮಿತ್ತ ಸೇವಾದಾರರ ಸೇವೆಯೊಂದಿಗೆ ಪುರುಷಾರ್ಥದ ವಿಧಿಯಲ್ಲಿ ಕೂಡ ಬಹಳ ಒಳ್ಳೆಯ ಉನ್ನತಿ ಆಗಬೇಕು. ಸೇವೆಯಲ್ಲಿ ವೇಗವಂತೂ ಸಮಯಾನುಸಾರವಾಗಿ ಬೆಳೆಯುತ್ತದೆ. ಅದಕ್ಕೆ ಬಾಪ್‌ದಾದಾ ಕೂಡ ಸದಾ ಒಳ್ಳೆಯದು ಎಂದು ಹೇಳುತ್ತಾರೆ ಆದರೆ ಸಮಯದ ವೇಗ ಮತ್ತು ಸೇವೆಯ ಸಂಪೂರ್ಣ ಸಮಾಪ್ತಿ ಸ್ಥಿತಿಯನ್ನು ನೋಡಿದಾಗ ಸೇವಾದಾರರ ಪುರುಷಾರ್ಥದ ವಿಧಿಯಲ್ಲಿ ಇನ್ನಷ್ಟು ವೃದ್ಧಿ ಆದರೆ ಸೇವೆ ನಾಲ್ಕು ಪಟ್ಟು ವೃದ್ಧಿಯಾಗುತ್ತದೆ ಎಂದು ಭಾವಿಸುತ್ತಿದ್ದಾರೆ. ಆದ್ದರಿಂದ ಮೊದಲು ಆ ಸೇವೆಯು ಕೂಡ ಬಹಳ ಬಹಳ ಅವಶ್ಯಕ. ಸೇವಾ ಸಮಯವನ್ನು ಬೇರೆಯಾಗಿ ನಿರ್ಣಯಿಸಿಕೊಳ್ಳಿ ಮತ್ತು ಪುರುಷಾರ್ಥದ ವೃದ್ಧಿಗಾಗಿ ಬೇರೆ ಸಮಯವನ್ನು ನಿರ್ಣಯಿಸಿಕೊಳ್ಳಿ. ಸೇವೆಗೆ ನಿಮಿತ್ತವಾದ ಆತ್ಮರಲ್ಲಿ ಈಗ ಆತ್ಮಿಕ ಶಕ್ತಿ ಬೇಕು. ಆತ್ಮಿಕ ಶಕ್ತಿ ಬೆಳೆಯುವುದರಿಂದ ಇತರರನ್ನು ಕೂಡ ಸಹಯೋಗಿಯನ್ನಾಗಿ ಮಾಡಿ ತಂದೆಗೆ ಅರ್ಪಣೆ ಮಾಡಬಲ್ಲಿರಿ. ಕೆಲವರು ಆತ್ಮರು ನಿಮ್ಮ ಸಹಯೋಗಕ್ಕಾಗಿ ಚಾತ್ರಕರಂತೆ ಇದ್ದಾರೆ ಆದರೆ ಅವರಿಗೆ ಅವರ ಶಕ್ತಿ ಇಲ್ಲ ನೀವು ಅವರಿಗೆ ನಿಮ್ಮ ಶಕ್ತಿಗಳನ್ನು ವಿಶೇಷವಾಗಿ ಸಹಾಯ ಮಾಡಬೇಕಾಗಿರುತ್ತದೆ. ಆದ್ದರಿಂದ **ನಿಮಿತ್ತವಾದ ಸೇವಾದಾರರಲ್ಲಿ ಸರ್ವ ಶಕ್ತಿಗಳ ಶಕ್ತಿ ಇದೆ ಆದರೆ ಎಷ್ಟು ಬೇಕೋ ಅಷ್ಟು ಇಲ್ಲ ಸ್ವಯಂನ ಪ್ರತಿ ಉಪಯೋಗಿಸುತ್ತಿರುವ ಕಾರಣ ಇತರರಿಗೆ ಪೂರ್ತಿ ಶಕ್ತಿಯನ್ನು ಕೊಡಲಾಗುತ್ತಿಲ್ಲ. ಬ್ರಹ್ಮ ಬಾಬಾ ಅಂತಿಮದಲ್ಲಿ ಶಕ್ತಿಯನ್ನು ಅರ್ಪಣೆ ಮಾಡಿದರು ಆ ಶಕ್ತಿಯಿಂದಲೇ ಈ ಕಾರ್ಯ ಈಗಲೂ ಮುಂದುವರೆಯುತ್ತಿದೆ ಆದಿಯಲ್ಲಿ ಧನವನ್ನು ಅರ್ಪಣೆ ಮಾಡಿದರು ಅದರಿಂದ ಯಜ್ಞದ ಸ್ಥಾಪನೆಯಾಯಿತು ಮತ್ತು ಅಂತಿಮದಲ್ಲಿ ಶಕ್ತಿಗಳನ್ನು ಅರ್ಪಣೆ ಮಾಡಿದರು ಅದರಿಂದ ಸೇವೆ ವೃದ್ಧಿಯನ್ನು ಪಡೆಯುತ್ತಿದೆ. ಬ್ರಹ್ಮಾ ಬಾಬಾರವರಾದರೆ ಮಾಡಿದರು. ಆದರೆ ಅನುಸರಿಸುವವರು ಮಕ್ಕಳೇ ತಾನೇ ಒಬ್ಬ ಬ್ರಹ್ಮಬಾಬಾ ಮಾಡಿರುವ ಅರ್ಪಣೆಯಿಂದ ಎಷ್ಟು ಜನ ಆತ್ಮರು ಬಂದರು ಮತ್ತು ಬರುತ್ತಲೇ ಇದ್ದಾರೆ. ಒಂದು ವೇಳೆ ಇಷ್ಟು ಜನ ನಿಮಿತ್ತರೆಲ್ಲರೂ (ಯಜ್ಞ ಸೇವೆಗೆ ಎಲ್ಲರೂ ನಿಮಿತ್ತರೇ) ತಮ್ಮಶಕ್ತಿಗಳನ್ನು ಆತ್ಮರಿಗಾಗಿ ಅರ್ಪಣೆ ಮಾಡಿದರೆ ಏನಾಗುತ್ತದೆ.** ಈಗ ಇದು ಅವಶ್ಯಕ ನಿಮ್ಮ ಪುರುಷಾರ್ಥದಲ್ಲಿಯೇ ಶಕ್ತಿಯನ್ನು ವ್ಯರ್ಥ ಮಾಡಿಕೊಳ್ಳಬಾರದು ನಿಮ್ಮ ಉನ್ನತಿಯನ್ನು ಮಾಡಿಕೊಳ್ಳಬೇಕು. ಆದರೆ ವ್ಯರ್ಥವು ಆಗುತ್ತಿದೆ ಆದ್ದರಿಂದ ಸಮಯದ ವೇಗವನ್ನು ಅನುಸರಿಸಿ ಮತ್ತಷ್ಟು ಅಧಿಕವಾಗಬೇಕು. ಈಗ ಮಧ್ಯ ಮಧ್ಯದಲ್ಲಿ ಚಿಕ್ಕ ಚಿಕ್ಕ ಆಟಗಳನ್ನು ಆಡುತ್ತಿದ್ದೀರಿ ಆದ್ದರಿಂದ ಪ್ರತಿಯೊಬ್ಬರೂ ಮನಸ್ಸಿನಿಂದ ಸ್ವಯಂ ಅನ್ನು ನಿಮಿತ್ತವಾಗಿ ಭಾವಿಸಿರಿ ಇದರಲ್ಲಿ ಇತರರನ್ನು ನೀವು ಮುಂದೆ ಎಂದು ಎನ್ನಬೇಡಿರಿ. ಮೊದಲು ನಿಮ್ಮನ್ನು

ನೀವು ಮುಂದೆ ನಾನು ಎಂದು ತಿಳಿಯಿರಿ ಮನಸ್ಸಿನಿಂದ ಉಲ್ಲಾಸದಿಂದ ನಾನು ಅರ್ಜುನನಾಗಬೇಕು ಎಂದು ತಿಳಿಯಿರಿ ಅರ್ಜುನ ಅರ್ಥಾತ್ ಮಾಸ್ಟರ್ ಬ್ರಹ್ಮ ಕಾರ್ಯಕ್ರಮದ ಅನುಸಾರವಾಗಿ ಸ್ವಉನ್ನತಿಯ ಕಾರ್ಯಕ್ರಮವನ್ನು ಮಾಡುತ್ತಾ ಬಂದಿದ್ದೀರಿ ಆದರೆ ಈ ವರ್ಷ ಬಾಪ್‌ದಾದಾ ಪ್ರತಿಯೊಬ್ಬ ಸ್ನೇಹಿತನಿಂದ ಸ್ನೇಹದ ಪ್ರತ್ಯಕ್ಷ ರೂಪವಾಗಿ ಮನಸ್ಪೂರ್ವಕ ಉನ್ನತಿಯನ್ನು ಬಯಸುತ್ತಿದ್ದಾರೆ. ಆದರೆ ಕಾರ್ಯಕ್ರಮದ ಅನುಸಾರವಾಗಲ್ಲ. ಎಲ್ಲಿ ಸ್ನೇಹವಿರುತ್ತದೆಯೋ ಅಲ್ಲಿ ಬಲಿಯಾಗುವುದು ಕೂಡ ಪ್ರೀತಿಯಿಂದಲೇ ಇರುತ್ತದೆ ಶ್ರಮವಿರುವುದಿಲ್ಲ. ಎಲ್ಲರ ಮನಸ್ಸಿನಲ್ಲಿ ಈ ಉಲ್ಲಾಸವಿದ್ದರೆ ಸಫಲತೆ ಬರುತ್ತದೆ. ಒಂದು ವೇಳೆ ತಂದೆಯೊಂದಿಗೆ ಪ್ರೀತಿ ಇದ್ದರೆ ಈ ಬಾರಿ ಮನಸ್ಸಿನ ಪ್ರೀತಿಯನ್ನು ನೋಡುತ್ತೇನೆ. ಸ್ವಲ್ಪ ಬಲಿಯಾಗಬೇಕಾಗಿ ಬಂದರು ಕೂಡ ದೊಡ್ಡ ವಿಷಯವೇ ಸೇವೆಯಲ್ಲಿ ಸಫಲತೆಗಾಗಿ ಏನು ಬಲಿ ಮಾಡಬೇಕು? ಗೊತ್ತಿದೆ ತಾನೇ? ಅದಕ್ಕಾಗಿಯೂ ಸಮಯ ಬೇಕು. ಸೇವೆಯು ತಪ್ಪದೇ ಮಾಡಬೇಕು ಮತ್ತು ಸ್ವಉನ್ನತಿಯೂ ಮಾಡಿಕೊಳ್ಳಬೇಕು. ಈ ಬಾರಿ ಬಾಪ್‌ದಾದಾ ತನ್ನ ಮಿಲನದ ಸಮಯವನ್ನು ಇದಕ್ಕಾಗಿಯೇ ಕೊಡುತ್ತಾರೆ. ಫಲಿತಾಂಶವನ್ನು ನೋಡಿದ ನಂತರ ಬಾಪ್‌ದಾದಾ ಕಾರ್ಯಕ್ರಮವನ್ನು ತಯಾರು ಮಾಡುತ್ತಾರೆ ಆಗ ನಾವು ಬರುವುದಿಲ್ಲವಲ್ಲ ಎಂದು ತಿಳಿಯಬೇಡಿರಿ.

ದೇಶವಿದೇಶದವರು ಯಾರಾದರೂ ಈ ವರ್ಷ ಬಾಪ್‌ದಾದಾರವರನ್ನು ಭೇಟಿಯಾಗಲು ಬರುವುದಿಲ್ಲ ಎಂಬುವವರಿಗಾಗಿ ವಿಧಿ ಏನೆಂದು ತಿಳಿಸುತ್ತಿದ್ದೇನೆ. ಭಾರತ ದೇಶದವರು ಐದು ದಿನ ಪ್ರತಿ ಗ್ರೂಪ್ ರಿಫ್ರೆಶ್ ಆಗಬೇಕು ಮತ್ತು ಒಂದು ದಿನ ಬರುವುದು ಮತ್ತೊಂದು ದಿನ ಹೋಗುವುದು ಈ ವಿಧಿಯಿಂದ ಭಾರತವಾಸಿಯರು ನಾಲ್ಕು ಗ್ರೂಪ್ ಗಳು ಮತ್ತು ವಿದೇಶಿಯರು ಮೂರು ಗ್ರೂಪ್ ಗಳಂತೆ ಬರಬೇಕು. ವಿದೇಶಿಯರಿಗೆ 15 ದಿನಗಳ ಕಾರ್ಯಕ್ರಮವಿರುತ್ತದೆ ಬಾಪ್‌ದಾದಾ ಪ್ರತಿ ಗ್ರೂಪ್ ನವರನ್ನು ಒಂದು ಬಾರಿ ಭೇಟಿಯಾಗುತ್ತಾರೆ. ಮುರಳಿಯನ್ನೂ ಮಾಡುತ್ತಾರೆ ಮತ್ತು ಗ್ರೂಪನ್ನು ಕೂಡ ಭೇಟಿಯಾಗುತ್ತಾರೆ. ಇನ್ನು ಉಳಿದ ಸಮಯ ವಿಶೇಷವಾಗಿ ಸೇವಾದಾರಿಗಳಿಗಾಗಿ. ವಿದೇಶದವರ ಗ್ರೂಪ್ ಒಂದಾದರೂ ಮದುವನದಲ್ಲಿಯೇ ಉಳಿದ ನಾಲ್ಕು ಗ್ರೂಪ್ಗಳನ್ನು ಮದುವನದಲ್ಲಿ ಸೌಕರ್ಯಗಳ ಆಧಾರದಿಂದ ನೀವು ಪ್ಲಾನ್ ಮಾಡಿಕೊಳ್ಳಿರಿ. ವಿದೇಶಿಯರು ಡಿಸೆಂಬರ್ ನಲ್ಲಿ ಮತ್ತು ಮಾರ್ಚ್ ನಲ್ಲಿ ಬರುತ್ತಾರೆ ಆದ್ದರಿಂದ ಎರಡು ಗ್ರೂಪ್ಗಳನ್ನು ಒಂದು ತಿಂಗಳಲ್ಲಿ, ಮತ್ತೊಂದು ತಿಂಗಳಲ್ಲಿ ಒಂದು ಗ್ರೂಪನ್ನು ಇಟ್ಟುಕೊಳ್ಳಬಹುದು. ಭಾರತವಾಸಿಯರಿಗಾದರೆ ಜನವರಿ 18 ಇದೆ ವಿದೇಶಿಯರಿಗೆ ಶಿವಜಯಂತಿ ಸೆಪ್ಟೆಂಬರ್ ನಿಂದ ನವೆಂಬರ್ ಈ ತಿಂಗಳ ಸೇವೆಗಾಗಿ ಬಹಳ ಒಳ್ಳೆಯದು ಪೂರ್ತಿ ಶಕ್ತಿಯಿಂದ ಸೇವೆ ಮಾಡಿರಿ. ಉಳಿದ ಸಮಯದಲ್ಲಿ ಸೇವಾಧಾರಿಗಳ ಗ್ರೂಪನ್ನು ಇಡಿ ಆದರೆ ಬಾಪ್‌ದಾದಾ ಹೇಳಿರುವ ವಿಷಯವನ್ನು ಮರೆತು ಹೋಗಬಾರದು ಕಾರ್ಯಕ್ರಮದ ಆಧಾರವಾಗಿ ಉನ್ನತಿ ಮಾಡಿಕೊಳ್ಳಬಾರದು ಮನಸ್ಪೂರ್ವಕವಾಗಿ ಉನ್ನತಿ ಆಗಬೇಕು. ಮನಸ್ಪೂರ್ವಕ ಉಲ್ಲಾಸದಿಂದ ಭಟ್ಟಿ ಕಾರ್ಯಕ್ರಮ ಮಾಡಬೇಕು ಸ್ವಯಂ ದೃಢ ಸಂಕಲ್ಪ ಮಾಡಿರಿ. ನಾನು ಬದಲಾಗಬೇಕು, ನಾನು ಅರ್ಜುನನಾಗಬೇಕು ಮಾಸ್ಟರ್ ಬ್ರಹ್ಮನಾಗಬೇಕು ಎಂಬ ದೃಢತೆಯನ್ನು ಇಡಿ.

ನಾಲ್ಕನೇ ವಿಷಯ - ಎಲ್ಲಾ ಸೇವಾಸ್ಥಾನಗಳಲ್ಲಿ ಕಡಿಮೆಯಲ್ಲಿ ಕಡಿಮೆ ಏಳು ದಿನಗಳು ಅಥವಾ ಅಷ್ಟಕ್ಕಿಂತ ಹೆಚ್ಚು ಮಾಡಬಲ್ಲಿರಾದರೆ 15 ದಿನಗಳು ಸ್ವಉನ್ನತಿಗಾಗಿ ಅಥವಾ ಸ್ನೇಹ ಮಿಲನಗಳು ಪ್ರತಿ ಸೇವಾಕೇಂದ್ರದವರು ವ್ಯಕ್ತಿಗತವಾಗಿಯಾದರೂ ಅಥವಾ ಚಿಕ್ಕ ಚಿಕ್ಕ ಸ್ಥಾನಗಳು ಎಲ್ಲಾ ಸೇರಿ ಮಾಡಿರಿ ಆದರೆ ಪ್ರತಿ ಈಶ್ವರಿಯ ವಿದ್ಯಾರ್ಥಿಗೆ ಅಥವಾ ಬ್ರಾಹ್ಮಣಾತ್ಮನಿಗೆ ಸ್ವಉನ್ನತಿಯ ಕಾರ್ಯಕ್ರಮವಿರಬೇಕು ಸ್ನೇಹ ಮಿಲನ ಅಥವಾ ಮನಸ್ಸಿನಲ್ಲಿ ಮನಸ್ಸಿನಿಂದ ಪುರುಷಾರ್ಥದ ಪ್ರಗತಿಗಾಗಿ ಕಾರ್ಯಕ್ರಮವನ್ನು ತಪ್ಪದೇ ಇಟ್ಟುಕೊಳ್ಳಬೇಕು. ನಾಲ್ಕು ಕಡೆ ಇರುವ ಬ್ರಾಹ್ಮಣಾತ್ಮರೆಲ್ಲರಿಗೂ ಈ ಅವಕಾಶ ಕೊಡಬೇಕು ಮತ್ತು ತೆಗೆದುಕೊಳ್ಳಬೇಕು ಕೂಡ ಬಾಪ್‌ದಾದಾ ಒಂದು ಗುಪ್ತರಹಸ್ಯವೂ ಹೇಳುತ್ತಿದ್ದಾರೆ. ಯಾರಾದರೆ ವಿಶೇಷವಾಗಿ ಮನಸ್ಪೂರ್ವಕವಾಗಿ ಪ್ರಗತಿ ಪಟ್ಟಿ ಮಾಡುತ್ತಾರೋ ಅವರಿಗೆ ಬಾಪ್‌ದಾದಾರವರಿಂದ ಮತ್ತಷ್ಟು ಆಶೀರ್ವಾದಗಳ ಬಹುಮಾನ ಲಭಿಸುತ್ತದೆ. ಸ್ಥೂಲ ಬಹುಮಾನ ಎಂಬುವುದು ದೊಡ್ಡ ವಿಷಯವೇನಲ್ಲ ಆದರೆ ವಿಶೇಷವಾಗಿ ಆತ್ಮನ ಒಂದೊಂದು ಕ್ಷಣದ ಟಿವಿ ಬಾಪ್‌ದಾದಾರವರ ಹತ್ತಿರ ಇರುತ್ತದೆ. ಬಾಬಾ ಒಂದೇ ಸಮಯದಲ್ಲಿ ಎಲ್ಲರನ್ನು ನೋಡಬಲ್ಲರು. ಆದ್ದರಿಂದ ಯಾರಾದರೆ ಮನಸ್ಸಿನಿಂದ ತಮ್ಮ ಪ್ರಗತಿಗಾಗಿ ಸಂಕಲ್ಪ ಮಾಡುತ್ತಾರೆಯೋ

ಉನ್ನತಿ ಮಾಡಿಕೊಳ್ಳುತ್ತಾರೋ ಅವರಿಗೆ ವಿಶೇಷ ಆಶೀರ್ವಾದಗಳು ಲಭಿಸುತ್ತದೆ. ಅಂದು ವಿಶೇಷ ಆಶೀರ್ವಾದಗಳ ದಿನದಂತೆ ಅನುಭವ ಮಾಡಿಕೊಳ್ಳುತ್ತೀರಿ. ಮೀಟಿಂಗ್ನಲ್ಲಿಯೂ ಕೂಡ ಮೊದಲು ಈ ನವೀನತೆ ಮಾಡಬೇಕು ಬುದ್ಧಿಗಾಗಿ ಅಥವಾ ಸೇವೆಗಾಗಿ ಕಾರ್ಯಕ್ರಮ ತಯಾರಾಗುತ್ತಿದೆ. ಆದರೆ ಮನಸ್ಸಿಗೂ ತಯಾರಾಗಬೇಕು ಈ ಫಲಿತಾಂಶ ನೋಡಿದ ನಂತರ ಮುಂಬರುವ ವರ್ಷಕ್ಕಾಗಿ ಹೊಸ ಕಾರ್ಯಕ್ರಮವನ್ನು ಹೇಳುತ್ತೇನೆ ಹಳೆಯವರಿಗಾಗಿ ಹೊಸ ಪ್ಲಾನ್ ಕೂಡ ಆನಂತರ ಹೇಳುತ್ತೇನೆ ಒಳ್ಳೆಯದು.

**ಸದಾ ತಮ್ಮ ಚೆಹರೆ ಮತ್ತು ಚಲನೆಯಲ್ಲಿ ಪವಿತ್ರತೆಯ ಆತ್ಮೀಯತೆಯ ಹೊಳಪಿರುವವರು, ಸದಾ ಪ್ರತೀ ಹೆಜ್ಜೆಯಲ್ಲಿ ಬ್ರಹ್ಮಾಚಾರೀ ಶ್ರೇಷ್ಠ ಆತ್ಮರು, ಸದಾ ತಮ್ಮ ಸೇವೆಯ ಸರ್ವ ಖಾತೆಗಳನ್ನು ಸಂಪನ್ನವಾಗಿಟ್ಟುಕೊಳ್ಳುವವರು, ಸದಾ ಹೃದಯದಿಂದ ತನ್ನ ಉನ್ನತಿಯ ದೃಡ ಸಂಕಲ್ಪ ಮಾಡುವವರು, ಸದಾ ಸ್ವ-ಉನ್ನತಿಯ ಪ್ರತಿ ಸ್ವಯಂನ್ನು ನಂಬರ್‌ವನ್ ಆತ್ಮ ನಿಮಿತ್ತನನ್ನಾಗಿ ಮಾಡಿಕೊಳ್ಳುವಂತಹ, ತಂದೆಗೆ ಪ್ರಿಯ ಹಾಗೂ ವಿಶೇಷ, ಬ್ರಹ್ಮಾತಾಯಿಗೆ ಪ್ರಿಯರು, ಇಂದು ತಾಯಿಯ ದಿನವನ್ನು ಆಚರಿಸಿದಿರಲ್ಲವೇ, ಅಂದಾಗ ಬ್ರಹ್ಮಾ ತಾಯಿಯ ಅತೀ ಮುದ್ದಿನ ಮಕ್ಕಳಿಗೆ ಬ್ರಹ್ಮಾತಾಯಿಯ ಹಾಗೂ ವಿಶೇಷ ತಂದೆಯದೂ ಸಹ ಹೃದಯಪೂರ್ವಕ ನೆನಪು-ಪ್ರೀತಿ ಹಾಗೂ ನಮಸ್ತೆ.**

**ಮಧುಬನ ನಿವಾಸಿಗಳ ಜೊತೆ.**

ಮಧುಬನ ನಿವಾಸಿಗಳಿಗೆ ಒಳ್ಳೆಯ ಮತ್ತು ಸುವರ್ಣ ಅವಕಾಶ ಸಿಗುತ್ತದೆ. ಡ್ರಾಮಾನುಸಾರ ಯಾರಿಗೆ ಬಾರಿ-ಬಾರಿ ಸುವರ್ಣ ಅವಕಾಶ ಸಿಗುವುದೋ, ಅವರಿಗೆ ಬಾಪ್ ದಾದಾ ಅತಿ ದೊಡ್ಡ “ಚಾನ್ಸಲರ್" (ಕುಲಪತಿ) ಎನ್ನುತ್ತಾರೆ. ಸೇವೆಯ ಫಲ ಮತ್ತು ಬಲ ಎರಡೂ ಪ್ರಾಪ್ತಿ ಆಗುತ್ತವೆ. ಬಲವೂ ಸಿಗುತ್ತಿದೆ, ಆ ಬಲದಿಂದ ಸೇವೆ ನಡೆಯುತ್ತಿದೆ. ಮತ್ತು ಫಲ ಶಕ್ತಿಶಾಲಿಯನ್ನಾಗಿ ಮಾಡಿ ಮುಂದುವರೆಸುತ್ತಿದೆ. ಎಲ್ಲರಿಗಿಂತ ಜಾಸ್ತಿ ಮುರಳಿ ಯಾರು ಕೇಳುತ್ತಾರೆ? ಮಧುಬನವಾಸಿಗಳು. ಅನ್ಯರು ಲೆಕ್ಕಮಾಡಿ ಮುರಳಿ ಕೇಳುತ್ತಾರೆ. ಮತ್ತು ನೀವು ಸದಾ ಕೇಳುತ್ತಿರುತ್ತೀರಿ. ನೀವು ಕೇಳುವುದರಲ್ಲಿ ಒಂದನೇ ನಂಬರ್ ಆಗಿರುವಿರೋ ಇಲ್ಲವೋ. ಮಾಡುವುದರಲ್ಲಿ ಕೂಡ? ಮಾಡುವುದರಲ್ಲಿ ಮೊದಲ ನಂಬರ್ ಬರುತ್ತೀರಾ ಅಥವಾ ಎರಡು ಮೂರು ಆಗಿ ಬಿಡುತ್ತದೆಯೋ? ಯಾರು ಸಮೀಪ ಆಗಿರುತ್ತಾರೆ ಅವರ ಮೇಲೆ ಸಲಿಗೆ ಇರುತ್ತದೆ ಮತ್ತು ಬಾಪ್ ದಾದರವರದ್ದೂ ವಿಶೇಷ ಸಲಿಗೆ ಇದೆ. ಮಾಡಲೇ ಬೇಕು ಮತ್ತು ಮೊದಲ ನಂಬರಿನಲ್ಲಿ, ಯಾವುದರಲ್ಲೂ ಹಿಂದಿಲ್ಲ. ಎಲ್ಲಾ ಜಮಾದ ಖಾತೆಯಲ್ಲಿ ಮೊದಲ ನಂಬರ್ ಬರಬೇಕು ಮತ್ತು ಪೂರ್ಣವಾಗಿರಬೇಕು. ಯಾವ ಖಾತೆಯಲ್ಲೂ ಸ್ವಲ್ಪ ಮಾತ್ರ ಖಾಲಿ ಇರಬಾರದು. ಯಾವ ತರಹ ಮಧುಬನದಲ್ಲಿ ಸರ್ವ ಪ್ರಾಪ್ತಿಗಳು ಶಾರೀರಿಕವಾಗಲಿ ಆತ್ಮೀಕವಾಗಲಿ - ಮೊದಲ ದರ್ಜೆಯದ್ದು ಸಿಗುತ್ತದೆ. ಅದೇ ತರಹ ಮಾಡುವುದರಲ್ಲೂ ಮೊದಲನಂಬರ್. ಮೊದಲ ದರ್ಜೆಯವರ(ಒಂದನೇ ನಂಬರ್) ಲಕ್ಷಣವಾಗಿದೆ ಪ್ರತಿಯೊಂದು ಮಾತಿನಲ್ಲೂ ವಿಜಯಿಗಳು. ವಿಜಯಿಗಳಾಗಿರುವಿರಿ ಎಂದರೆ ಮೊದಲ ನಂಬರ್ ನವರೆಂದು ಅರ್ಥ. ಒಮ್ಮೊಮ್ಮೆ ವಿಜಯಿಗಳಾದರೆ ಮೊದಲ ನಂಬರ್ ನವರಲ್ಲವೆಂದರ್ಥ. ಒಳ್ಳೆಯದು, ಸೇವೆ ಮಾಡಿದ್ದಕ್ಕೆ ಅಭಿನಂದನೆಗಳು. ಸೇವೆಯ ಪ್ರಮಾಣಪತ್ರ ಅಂತೂ ಸಿಕ್ಕಿದೆ. ಇನ್ನಾವುದು ಬಾಕಿ ಇದೆ?

ಒಂದನೆಯದು ತಮ್ಮ ಪುರುಷಾರ್ಥದಲ್ಲಿ ಸ್ವ-ಸಂತುಷ್ಟರಾಗಿ, ಎರಡನೆಯದಾಗಿ ಪ್ರಭುವಿಗೆ ಪ್ರಿಯರಾಗಿ, ಮೂರನೆಯದಾಗಿ ಪರಿವಾರಕ್ಕೆ ಪ್ರಿಯರಾಗಿ. ಈ ಮೂರೂ ಪ್ರಮಾಣಪತ್ರಗಳನ್ನು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು. ಈ ತರಹ ಅಲ್ಲ, ಮೊದಲನೆಯ ಪ್ರಮಾಣಪತ್ರ - ಸ್ವ- ಸಂತುಷ್ಟರು ಆಗಿದ್ದೀರಿ. ಆದರೆ ಎರಡನೆಯದು ಇಲ್ಲ. ಮೂರೂ ಪ್ರಮಾಣಪತ್ರಗಳು ಒಟ್ಟಿಗೆ ಸಿಗಬೇಕು. ಅಂದಹಾಗೆ, ತಂದೆಗೆ ಪ್ರಿಯರು ಯಾರು? ತಂದೆ ಹೇಳಿದಂತೆ ಮಾಡುವವರು. ಇದಾಗಿದೆ, ಪ್ರಭುವಿಗೆ ಪ್ರಿಯರ ಪ್ರಮಾಣಪತ್ರ. ಸ್ವ-ಪ್ರಿಯರೆಂದರೆ, ಯಾವುದು ನಿಮಗೆ ಪ್ರಿಯವೋ ಅದು ತಂದೆಗೂ ಪ್ರಿಯ. ನಿಮ್ಮ ಪ್ರಾಪಂಚಿಕ ನೆಚ್ಚಿನದ್ದಲ್ಲ. ತಂದೆಗೆ ಯಾವುದು ಇಷ್ಟವೋ ಅದೇ ನನಗೂ ಇಷ್ಟ, ಸಂತುಷ್ಟತೆಯ ಪ್ರಮಾಣಪತ್ರವೇ ಆಗಿದೆ - ಯಾವುದರಿಂದ ತಂದೆ ಸಂತುಷ್ಟರೋ

ಅದರಿಂದ ನಾನು ಸಂತುಷ್ಟ, ಜೊತೆಯಲ್ಲಿ ಪರಿವಾರವೂ ಸಂತುಷ್ಟ ಹಾಗಾದರೆ ಈ ಮೂರೂ ಪ್ರಮಾಣಪತ್ರಗಳನ್ನು ಪಡೆದುಕೊಂಡಿದ್ದೀರಾ? ಪ್ರಮಾಣಪತ್ರ ಸಿಗಬೇಕಾದರೆ ಅದನ್ನು ಪರಿಶೀಲಿಸಲಾಗುತ್ತದೆ. ದೊಡ್ಡವರಿಂದ ಪರಿಶೀಲನೆ ಮಾಡಬೇಕಾಗುತ್ತದೆ. ತಂದೆಯಂತೂ ಬಹುಬೇಗ ರಾಜಿಯಾಗುತ್ತಾರೆ. ಆದರೆ ಇಲ್ಲಿ ಎಲ್ಲರನ್ನು ರಾಜಿ ಮಾಡಿಸಬೇಕಾಗುತ್ತದೆ. ಯಾರು ನಿಮ್ಮ ಜೊತೆಯಲ್ಲಿ ಇರುತ್ತಾರೋ ಅವರಿಂದ ಪ್ರಮಾಣಪತ್ರದ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ. ತಂದೆಯಂತೂ ಬಹಳ ದಯಾಹೃದಯಿ, ಬಹಳ ಬೇಗನೆ "ಹಾಂಜೀ" ಎನ್ನುತ್ತಾರೆ ಒಳ್ಳೆಯದು, ಎಲ್ಲರ ಸೇವಾ ವಿಭಾಗಗಳು ನಿರ್ವಿಘ್ನವಾಗಿವೆಯಾ? ನಿಮ್ಮ ಸೇವೆಯ ಸುಗಂಧ ವಿಶ್ವದಲ್ಲಿ ಹರಡಿದೆ ಮತ್ತು ಸೂಕ್ಷ್ಮವತನದ ತನಕವೂ ಬಂದಿದೆ. ಈಗ ಕೇವಲ ಈ ಮೂರು ಪ್ರಮಾಣಪತ್ರಗಳನ್ನು ಅನುಮೋದಿಸಿಕೊಳ್ಳಬೇಕಾಗಿದೆ. ಒಳ್ಳೆಯದು.

**ಭಾರತವಾಸಿಗಳ ಜೊತೆ.**

ಸುಖದಾತ ತಂದೆಯ ಜೊತೆ ನಾವು ಸುಖಿ ಮಕ್ಕಳಾಗಿದ್ದೇವೆಂದು? ಅನುಭವ ಆಗುತ್ತದೆಯೇ, ತಂದೆ ಸುಖದಾತ ಎಂದಮೇಲೆ ಮಕ್ಕಳು ಸುಖ ಸ್ವರೂಪರು ಆಗಿರುತ್ತಾರಲ್ಲವೇ? ಎಂದಾದರೂ ದುಖ:ದ ಅಲೆಗಳು ಬರುವುದಿಲ್ಲವೇ ಸುಖದಾತನ ಮಕ್ಕಳ ಬಳಿ ದುಖಃ ಬರಲು ಸಾಧ್ಯವಿಲ್ಲ. ಏಕೆಂದರೆ ಸುಖದಾತ ತಂದೆಯ ಖಜಾನೆ ನಿಮ್ಮ ಖಜಾನೆಯಾಗಿ ಬಿಟ್ಟಿದ್ದಲ್ಲವೇ. ಸುಖ ನಿಮ್ಮ ಆಸ್ತಿಯಾಗಿದೆ ಸುಖ, ಶಾಂತಿ, ಶಕ್ತಿ, ನಿಮ್ಮ ಖಜಾನೆ. ತಂದೆಯ ಖಜಾನೆಯಿಂದ ನಿಮ್ಮ ಖಜಾನೆ ತಯಾರಾಗಿದೆ, ಬಾಲಕರಿಂದ ಮಾಲೀಕರಾಗಿದ್ದೀರಲ್ಲವೇ ಒಳ್ಳೆಯದು. ಭಾರತ ಕೂಡ ಕಮ್ಮಿಯೇನಲ್ಲ. ಪ್ರತಿಯೊಂದು ಗ್ರೂಪ್ ನಲ್ಲೂ ಬಂದುಬಿಡುವಿರಿ. ತಂದೆಯೂ ಖುಷಿಪಡುತ್ತಾರೆ. ಐದು ಸಾವಿರ ವರ್ಷ ಅಗಲಿದವರು ಪುನ: ಸಿಕ್ಕಿದರು. ಅಂದ ಮೇಲೆ ಎಷ್ಟೊಂದು ಖುಷಿಯಾಗುತ್ತದೆ! ಯಾರಾದರೂ 10-12 ವರ್ಷ ಅಗಲಿ ಪುನ: ಸಿಕ್ಕಿದರೆ ಎಷ್ಟು ಖುಷಿಯಾಗುತ್ತದೆಯಲ್ಲವೆ! ಇಲ್ಲಿ 5000 ವರ್ಷಗಳಾದವು ತಂದೆ ಮಕ್ಕಳು ದೂರವಾಗಿ, ಮತ್ತೆ ಈಗ ಪುನಃ ಸಿಕ್ಕಿದ್ದಾರೆ! ಆದ್ದರಿಂದ ಬಹಳ ಖುಷಿಯಾಗುತ್ತದೆಯಲ್ಲವೆ! ಎಲ್ಲದಕ್ಕಿಂತ ಜಾಸ್ತಿ ಖುಷಿ ಯಾರ ಬಳಿ ಇದೆ? ಎಲ್ಲರ ಬಳಿ ಇದೆ. ಏಕೆಂದರೆ ಈ ಖುಷಿಯ ಖಜಾನೆಎಷ್ಟಿದೆಯೆಂದರೆ, ಯಾರು ಎಷ್ಟು ಪಡೆದುಕೊಂಡರೂ, ಅಗಣಿತವಾಗಿದೆ. ಹೀಗಾಗಿ ಪ್ರತಿಯೊಬ್ಬರೂ ಅಧಿಕಾರಿ ಆತ್ಮರಾಗಿದ್ದೀರಲ್ಲವೇ? ಸಂಗಮಯುಗಕ್ಕೆ ಯಾವ ಯಾವ ಯುಗ ಎನ್ನಲಾಗುತ್ತದೆ? ಖುಷಿಯ ಯುಗವಾಗಿದೆ. ಖಜಾನೆಯೇ ಖಜಾನೆ! ಎಷ್ಟು ಬೇಕಾದರೂ ತುಂಬಿಸಿಕೊಳ್ಳಿರಿ. ಧನವಾನ್ ಭವ, ಸರ್ವಖಜಾನೆಭವದ ವರದಾನ ಸಿಕ್ಕಿದೆ. ಸರ್ವಖಜಾನೆಗಳ ವರದಾನ ಸಿಕ್ಕಿದೆ. ಬ್ರಾಹ್ಮಣ ಜೀವನವೆಂದರೆ ಖುಷಿಯೇ ಖುಷಿ. ಈ ಖುಷಿ ಮಾಯವಾಗುವುದಿಲ್ಲ ತಾನೇ? ಮಾಯೆ ಈ ಖಜಾನೆಗಳ ಕಳ್ಳತನ ಮಾಡುವುದಿಲ್ಲ ತಾನೇ? ಯಾರು ಎಚ್ಚರಿಕೆಯಿಂದ ಇರುತ್ತಾರೆ. ಬುದ್ಧಿವಂತರಾಗಿರುತ್ತಾರೆ. ಅವರ ಖಜಾನೆಯನ್ನು ಎಂದೂ ಯಾರೂ ಲೂಟಿ ಮಾಡಲು ಸಾಧ್ಯವಿಲ್ಲ. ಯಾರು ಸ್ವಲ್ಪ ನಿರ್ಲಕ್ಷ್ಯರಾಗಿರುತ್ತಾರೋ ಅವರ ಖಜಾನೆ ಲೂಟಿಯಾಗುತ್ತದೆ. ನೀವು ಎಚ್ಚರಿಕೆಯಿಂದ ಇರುತ್ತೀರಲ್ಲ, ಇಲ್ಲಾ ಒಮೊಮ್ಮೆ ನಿದ್ರಿಸುತ್ತೀರೊ? ಯಾರಾದರೂ ನಿದ್ರಿಸಿದರೆ ಅವರದ್ದು ಕಳ್ಳತನವಾಗುತ್ತದೆಯಲ್ಲವೆ, ನಿರ್ಲಕ್ಷ್ಯರಾಗಿಬಿಟ್ಟರಿ! ಸದಾ ಎಚ್ಚರಿಕೆಯಿಂದಿದ್ದರೆ, ಜಾಗೃತಿ ಜ್ಯೋತಿಯಾಗಿದ್ದರೆ, ಮಾಯೆಗೆ ನಿಮ್ಮ ಖಜಾನೆ ಲೂಟಿ ಮಾಡುವಷ್ಟು ಧೈರ್ಯ ಇರದು. ಒಳ್ಳೆಯದು. ತಾವು ಎಲ್ಲಿಂದಾದರೂ ಬಂದಿರಲಿ, ಎಲ್ಲರೂ ಪದಮಾಪದಮ್ ಭಾಗ್ಯವಂತರಾಗಿದ್ದೀರಿ! ಇದೇ ಗೀತೆಯನ್ನು ಹಾಡುತ್ತಿರಿ – ಎಲ್ಲವನ್ನೂ ಪಡಕೊಂಡೆವು ಎಂದು. 21 ಜನ್ಮಗಳಿಗೆ ಖಾತರಿ ಇದೆ- ಖಜಾನೆಗಳು ಜೊತೆಯಲ್ಲಿ ಇರುತ್ತವೆಂದು. ಇಷ್ಟು ದೊಡ್ಡ ಖಾತರಿಯನ್ನು ಯಾರೂ ಕೊಡಲು ಸಾಧ್ಯವಿಲ್ಲ. ಅಂದ ಮೇಲೆ ಈ ಗ್ಯಾರಂಟಿ ಕಾರ್ಡ್ ತೆಗೆದುಕೊಂಡಿರುವಿರಿ ತಾನೆ? ಈ ಗ್ಯಾರಂಟಿ ಕಾರ್ಡ್ ಯಾವುದೇ ಸಾಮಾನ್ಯರು ಕೊಡುವುದಿಲ್ಲ. ದಾತ ತಂದೆ ಕೊಡುತ್ತಿದ್ದಾರೆ ಅಂದ ಮೇಲೆ ಯಾವ ಹೆದರಿಕೆಯೂ ಇಲ್ಲ ಯಾವುದೇ ಸಂಶಯವೂ ಇಲ್ಲ. ಒಳ್ಳೆಯದು.

***ಸರ್ವ ಅನುಭೂತಿಗಳಿಗೆ ಆಧಾರ ಪವಿತ್ರತೆ.***

ಆತ್ಮೀಯತೆಗೆ ಆಧಾರ ಪವಿತ್ರತೆಯಾಗಿದೆ. ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಎಷ್ಟೆಷ್ಟು ಪವಿತ್ರತೆಯ ಧಾರಣೆ ಇರುವುದು ಅಷ್ಟೇ ಆತ್ಮೀಯತೆಯ ಹೊಳಪು ಚಹರೆಯಲ್ಲಿ ಕಂಡುಬರುತ್ತದೆ. ಬ್ರಾಹ್ಮಣ ಜೀವನದ ಹೊಳಪು ಪವಿತ್ರತೆಯಾಗಿದೆ. ನಂತರ ಅತೀಂದ್ರಿಯ ಸುಖ ಮತ್ತು ಮಧುರ ಶಾಂತಿಗೆ ವಿಶೇಷ ಆಧಾರವು ಪವಿತ್ರತೆಯಾಗಿದೆ. ಪವಿತ್ರತೆಯ ನಂಬರ್ ಇದ್ದರೆ ಈ ಅನುಭೂತಿಯ ಪ್ರಾಪ್ತಿಗಳು ನಂಬರ್ ಒನ್ ಆಗುತ್ತದೆ. ಪವಿತ್ರತೆಯು ನಂಬರ್ ಒನ್ ಇದ್ದರೆ ತಂದೆಯ ಮೂಲಕ ಅನುಭೂತಿಗಳ ಪ್ರಾಪ್ತಿಯು ನಂಬರ್ ಒನ್ ಆಗಿಯೇ ಇರುತ್ತದೆ. ಆತ್ಮೀಯತೆಯ ನಯನಗಳು ಸದಾ ನಿರ್ಮಲವಾಗಿ ಕಾಣುತ್ತವೆ, ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಪವಿತ್ರತೆಯಿಂದ ಆತ್ಮೀಯತೆ, ಮುಖದಲ್ಲಿ ಬ್ರಾಹ್ಮಣ ಜೀವನದ ಹೊಳಪು, ನಿರಂತರ ಅತೀಂದ್ರಿಯ ಸುಖ, ಸದಾ ನನ್ನ ಆತ್ಮಿಕ ನಯನಗಳು ನಿರ್ಮಲವಾಗಿ ಕಾಣಿಸಿವೆ.

2. ನನ್ನ ಚಹರೆ ಮತ್ತು ನಡವಳಿಕೆ ಅಂತರ್ಮುಖಿಯಾಗಿ ಅತೀಂದ್ರಿಯ ಸುಖಿಯಾಗಿ ಅನುಭವ ಮಾಡಿಕೊಂಡು ಅರ್ಥಾತ್ ಮನಸಾ, ವಾಚಾ, ಕರ್ಮಣಾ ಪ್ರತಿಯೊಂದು ಹೆಜ್ಜೆಯಲ್ಲಿ ಬ್ರಹ್ಮಾಚಾರಿಯಾಗಿ (ರಿವೈಸ್ ಕೋರ್ಸ್ 07-12-1978 ಬ್ರಹ್ಮಚಾರಿ ಮತ್ತು ಬ್ರಹ್ಮಾಚಾರಿಯ ಬಗ್ಗೆ ತಂದೆ ತಿಳಿಸಿದ್ದಾರೆ) ಇದ್ದೇನೆ.

3. ನಾನು ನನ್ನ ಸಾಧನಾ ಸ್ವರೂಪದಲ್ಲಿ ಜ್ಞಾನ ಸಾಧನಗಳನ್ನು ಉಪಯೋಗಿಸಿದ್ದೇನೆ.

4. ನಾನು ಶಿವತಂದೆಯನ್ನು ತಳಹದಿಯನ್ನಾಗಿ ಮಾಡಿಕೊಂಡು ತಂದೆಯ ಆಶೀರ್ವಾದಗಳನ್ನು ಅನುಭವ ಮಾಡಿಕೊಳ್ಳುವುದರಿಂದ ಸಫಲತೆಯನ್ನು ಪಡೆದು ಸಾಧನಗಳು ಮತ್ತು ಸಾಧನೆಯ ಸಮಾನತೆಯನ್ನು ಉಳಿಸಿಕೊಂಡಿದ್ದೇನೆ.

5. ನಾನು ಮನಸ್ಸಿನ ಸಂಬಂಧ ನಿರಂತರ ತಂದೆಯೊಂದಿಗೆ ಜೋಡಿಸಿ ಶಕ್ತಿಶಾಲಿ ಸ್ಮೃತಿಯಿಂದ ಸಾಧನೆ ಮಾಡಿದ್ದೇನೆ. (ಸಾಧನೆ ಎಂದರೆ ಶಕ್ತಿಶಾಲಿ ಸ್ಮೃತಿ)

6. ನನ್ನ ಮನಸ್ಸು, ಬುದ್ಧಿ, ಹೃದಯ ಮತ್ತು ಶರೀರ ನಾಲ್ಕು ಜೊತೆ ಜೊತೆ ಮತ್ತು ತಂದೆಯ ಸಮಾನ ಸ್ಥಿತಿಯಲ್ಲಿಟ್ಟುಕೊಂಡು ಸಾಧನೆ ಮಾಡಿದ್ದೇನೆ.

7. ನಾನು ಪ್ರತಿ ಕ್ಷಣ, ಪ್ರತಿ ಸಂಕಲ್ಪದಲ್ಲಿ ತಂದೆಯನ್ನು ಜೊತೆಯಾಗಿಟ್ಟುಕೊಂಡು ನವೀನತೆಯ ಅನುಭವ ಮಾಡಿಕೊಂಡು ಅನೇಕ ಪಟ್ಟು ಉತ್ಸಾಹ ಉಲ್ಲಾಸಗಳನ್ನು ಬೆಳಸಿಕೊಂಡಿದ್ದೇನೆ.

8. ನಾನು ನಾಲ್ಕು ಸೇವೆಗಳು ಅರ್ಥಾತ್ ಸ್ವಸೇವೆ, ವಿಶ್ವ ಸೇವೆ, ಮನಸಾ ಸೇವೆಯೊಂದಿಗೆ ವಾಣಿಯಿಂದ ಸೇವೆ, ಯಜ್ಞ ಸೇವೆಯ ಮೇಲೆ ಗಮನವಿಟ್ಟಿದ್ದೇನೆ.

9. ನಾನು ಯಜ್ಞಕಾರ್ಯದಲ್ಲಿ ಗಮನದಿಂದ ಉಳಿತಾಯ ಮಾಡಿ ಮತ್ತು ಇತರರ ಧನವನ್ನು ಸಫಲ ಮಾಡಿಸಿ ಧನಸೇವೆಯ ಖಾತೆಯನ್ನು ಜಮಾ ಮಾಡಿಕೊಂಡಿದ್ದೇನೆ.

10. ನಾನು ವಾಣಿಯೊಂದಿಗೆ ಮನಸಾಸೇವೆ ಮಾಡಿ ಮನಸಾ ಸೇವೆಯ ಖಾತೆಯನ್ನು ಜಮಾ ಮಾಡಿಕೊಂಡಿದ್ದೇನೆ.

11. ನಾನು ಕರ್ಮಣಾ ಸೇವೆಯೊಂದಿಗೆ ಸಂಘಟನೆಯಲ್ಲಿ ಸಂಬಂಧ ಸಂಪರ್ಕದಲ್ಲಿ ಬಂದು ಕರ್ಮಣಾ ಸೇವೆ ಖಾತೆಯನ್ನು ಜಮಾ ಮಾಡಿಕೊಂಡಿದ್ದೇನೆ.

12. ನಾನು ಸೇವೆಯಲ್ಲಿ ಸಮಯ ಮತ್ತು ಬುದ್ಧಿಯಲ್ಲಿ ಸದಾ ಕಡಿಮೆ ಖರ್ಚು ಹೆಚ್ಚು ಫಲಿತಾಂಶ ಎಂಬ ವಿಷಯವನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದೇನೆ.

13. ನಾನು ಆರ್ಭಟವೂ ಇಲ್ಲದ, ನೀಚವೂ ಅಲ್ಲದ ಹಾಗೂ ಕಡಿಮೆಯೂ ಆಗದ, ಸದಾ ಮಧ್ಯಸ್ಥವಾಗಿ ಇರುವ ಬಾಪ್‌ದಾದಾ ಸಮಾನ ಸ್ವರೂಪ.

14. ನಾನು ಡಬಲ್ ಲೈಟ್ ಆಗಿ ಸೇವೆ ಮಾಡುವುದರಿಂದ ಸೇವೆಯು ವೃದ್ಧಿಯಾಗಿದೆ.

15. ನಾನು ಸ್ನೇಹ ಮಿಲನ, ಆತ್ಮರ ಭೂಮಿಯನ್ನು ತಯಾರು ಮಾಡಿ ದೊಡ್ಡ ಕಾರ್ಯಕ್ರಮದಿಂದ ಧ್ವನಿಯನ್ನು ಪ್ರಸಿದ್ಧಿ ಮಾಡಿದ್ದೇನೆ.

16. ನಾನು ಆತ್ಮಿಕ ಶಕ್ತಿಯಿಂದ ಪುರುಷಾರ್ಥದ ವಿಧಿಯಲ್ಲಿ ವೃದ್ಧಿ ಮಾಡಿಕೊಂಡು ಸೇವೆಯನ್ನು ನಾಲ್ಕು ಪಟ್ಟು ವೃದ್ಧಿ ಮಾಡಿದ್ದೇನೆ.

17. ನಾನು ಬ್ರಹ್ಮಾ ತಂದೆಯನ್ನು ಅನುಸರಿಸುತ್ತಾ ಸರ್ವಶಕ್ತಿಗಳನ್ನು ಅರ್ಪಣೆ ಮಾಡಿ ಇತರರನ್ನು ಸಹಯೋಗಿಯಾಗಿಸಿ ಸೇವೆಯ ವೃದ್ಧಿಯನ್ನು ಮಾಡಿದ್ದೇನೆ.

18. ನಾನು ಸ್ವಉನ್ನತಿಯ ಸಲುವಾಗಿ ಮನಸ್ಸಿನಿಂದ ಸ್ವಯಂ ಅನ್ನು ನಿಮಿತ್ತವಾಗಿ ಭಾವಿಸಿರುವ ಅರ್ಜುನನು.

19. ನಾನು ಸ್ನೇಹ ಮಿಲನ ಮತ್ತು ಸ್ವಉನ್ನತಿಯ ಕಾರ್ಯಕ್ರಮ ಮಾಡುವುದರಿಂದ ಬಾಪ್‌ದಾದಾರವರಿಂದ ಸ್ಥೂಲ ಮತ್ತು ಸೂಕ್ಷ್ಮ ಆಶೀರ್ವಾದಗಳನ್ನು ಪಡೆದಿದ್ದೇನೆ.